ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಭಾನುವಾರ, ಆಗಸ್ಟ್ 14, 2022

ಸಂಪುಟ : 49 ಸಂಚಿಕೆ : 92 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com





**ಅಮೃತ ಮಹೋತ್ಸವದ ಸಂಭ್ರಮ ...**

ದಾವಣಗೆರೆ ನಗರದೆಲ್ಲೆಡೆ 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂಭ್ರಮ ಗರಿಗೆದರಿದ್ದು, ಶನಿವಾರ ಮನೆಗಳು, ಮಳಿಗೆಗಳು, ಕಚೇರಿಗಳ ಮೇಲೆ ರಾಷ್ಟ್ರಧ್ವಜಗಳು ಹಾರಾಡಿದವು. ಲೇಬರ್ ಕಾಲೋನಿಯಲ್ಲಿ ಚಿಣ್ಣರು ರಾಷ್ಟ್ರಧ್ವಜ ಹಿಡಿದು ಸಂಭ್ರಮಿಸಿದರು (ಚಿತ್ರ-1), ಎಲ್ಲೆಡೆ ಧ್ವಜಗಳ ಮಾರಾಟದ ಭರಾಟೆ ಹೆಚ್ಚಾಗಿತ್ತು (ಚಿತ್ರ-2), ಮಹಾನಗರ ಪಾಲಿಕೆ ಹಾಗೂ ಹುತಾತ್ಮರ ಸ್ಮಾರಕ ಸಿಂಗಾರಗೊಂಡಿರುವುದು (ಚಿತ್ರ-3)

## ಯಶಸ್ಸಿಗೆ ಅಂಕ ಮತ್ತು ಕೌಶಲ್ಯ ಎರಡೂ ಮುಖ್ಯ

### ಪಂಚಮಸಾಲಿ ಸಮಾಜದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಶ್ರೀ ವಚನಾನಂದ ಮಹಾಸ್ವಾಮೀಜಿ




ದಾವಣಗೆರೆ, ಆ. 13- ವಿದ್ಯಾರ್ಥಿಗಳು ಅಂಕ ಗಳಿಕೆಯ ಜೊತೆ ಕೌಶಲ್ಯವನ್ನೂ ಬೆಳೆಸಿಕೊಂಡಾಗ ಮಾತ್ರ ಜೀವನದಲ್ಲಿ ಸಾಧನೆ ಮಾಡಲು ಸಾಧ್ಯ ಎಂದು ಹರಿಹರ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದ ಜಗದ್ಗುರು ಶ್ರೀ ವಚನಾನಂದ ಮಹಾಸ್ವಾಮೀಜಿ ಹೇಳಿದರು.

ವೀರಶೈವ ಲಿಂಗಾಯತ ಪಂಚಮಸಾಲಿ ಸಂಘ ಜಿಲ್ಲಾ ಘಟಕ, ಹರ ಸೇವಾ ಸಂಸ್ಥೆ ಹಾಗೂ ವೀರಶೈವ ಲಿಂಗಾಯತ ಪಂಚಮಸಾಲಿ ಜಗದ್ಗುರು ಪೀಠದ ಸಹಯೋಗದಲ್ಲಿ ನಗರದ ದೇವರಾಜ ಅರಸ್ ಬಡಾವಣೆಯ ಶಿವ ಪಾರ್ವತಿ ಕಲ್ಯಾಣ ಮಂಟಪದಲ್ಲಿ ಶನಿವಾರ ಪಂಚಮಸಾಲಿ ಸಮಾಜದ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರ ಸಮಾರಂಭದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಇಂದು ಅನೇಕ ವಿದ್ಯಾರ್ಥಿಗಳು ಹೆಚ್ಚು ಅಂಕ ಗಳಿಸಿರುತ್ತಾರೆ. ಆದರೆ ಅವರಲ್ಲಿ ಕೌಶಲ್ಯ ಇರುವುದಿಲ್ಲ. ಮತ್ತೆ ಕೆಲವರಲ್ಲಿ ಕೌಶಲ್ಯವಿದ್ದರೆ ಅಂಕ ಗಳಿಕೆಯಲ್ಲಿ ಹಿಂದಿರುತ್ತಾರೆ. ಇದರಿಂದಾಗಿ ಉತ್ತಮ ಉದ್ಯೋಗ ಪಡೆಯಲು ಸಾಧ್ಯವಾಗುವುದಿಲ್ಲ ಎಂದು ಹೇಳಿದರು.

**ಸಾಧಕರಿಗೆ ಸನ್ಮಾನ**

**ರಾಷ್ಟ್ರಪತಿ ಪದಕ ವಿಜೇತ ಡಾ.ಬಿ.ಹೆಚ್. ವೀರಪ್ಪ, ಪತ್ರಕರ್ತ ನಾಗರಾಜ್ ಎಸ್. ಬಡದಾಳ್, ಮುಖ್ಯಮಂತ್ರಿ ಪದಕ ವಿಜೇತೆ ಸರಸ್ವತಿ ವೀರಪ್ಪ, ಸರ್ವೋತ್ತಮ ಸೇವಾ ಪ್ರಶಸ್ತಿ ವಿಜೇತ ಬಿ.ಟಿ. ಪ್ರಕಾಶ್, ಬೆಸ್ಕಾಂ ಎಂಜಿನಿಯರ್ ಮಾಲಾ ಮುರುಗೇಶ್, ವಿಜ್ಞಾನ ಸಾಧಕ ಡಾ.ಚಿಕ್ಕನಗೌಡ್ರು, ಕೊಟ್ರೇಶ್ ಪ್ರಸಾದ್, ಪಾಲಿಕೆ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಬಾದಾಮಿ ಜಯಣ್ಣ ಅವರನ್ನು ಸನ್ಮಾನಿಸಿ, ಗೌರವಿಸಲಾಯಿತು.**

ಹಲವರಲ್ಲಿ ಪ್ರತಿಭೆ ಇರುತ್ತದೆ. ಆದರೆ ಪ್ರೋತ್ಸಾಹ ಇಲ್ಲದ ಕಾರಣ ಜೀವನದಲ್ಲಿ ಸಾಧನೆ ಮಾಡಲು ಸಾಧ್ಯವಾಗುವುದಿಲ್ಲ. ಈ ಹಿನ್ನೆಲೆಯಲ್ಲಿ ಪಂಚಮಸಾಲಿ ಸಂಘ ಹಾಗೂ ಶ್ರೀ ಪೀಠವು ಪ್ರತಿಭಾನ್ವಿತರನ್ನು ಪ್ರೋತ್ಸಾಹಿಸುವ ಕೆಲಸ ಮಾಡುತ್ತಿದೆ. 1994ರಿಂದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದ ಮೂಲಕ ಇಲ್ಲಿಯವರೆಗೆ 18 ಸಾವಿರ ಎಸ್ಸೆಸ್ಸೆಲ್ಸಿ (4ನೇ ಪುಟಕ್ಕೆ)

**ಶ್ರೀಮಠದೊಂದಿಗೆ ಸಂಪರ್ಕದಲ್ಲಿರಿ**

**ನಮ್ಮದು ಅಂತರ ರಾಷ್ಟ್ರೀಯ ಮಟ್ಟದ ಮಠ. ದೇಶ-ವಿದೇಶಗಳಿಂದ ಜನರು ಮಠಕ್ಕೆ ಬಂದು ಹೋಗುತ್ತಿದ್ದಾರೆ. ನೀವೂ ಸಹ ಮಠಕ್ಕೆ ಬಂದು ಹೋಗುತ್ತಿರಿ. ಆಗ ಮಠ ಏನು ಕೆಲಸ ಮಾಡುತ್ತದೆ ಎಂಬುದು ನಿಮಗೂ ತಿಳಿಯುತ್ತದೆ. ನಿಮ್ಮ ಕಷ್ಟ-ಸಮಸ್ಯೆ, ಬೇಡಿಕೆಗಳು ನಮಗೂ ತಿಳಿಯುತ್ತವೆ ಎಂದು ವಚನಾನಂದ ಶ್ರೀಗಳು ವಿದ್ಯಾರ್ಥಿ, ಪೋಷಕರಿಗೆ ಹೇಳಿದರು.**

**1 ಲಕ್ಷ ದೇಣಿಗೆ ನೀಡಿದ ಸುರೇಶ್**

**ಪಂಚಮಸಾಲಿ ಸಮಾಜ ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರಕ್ಕಾಗಿ 1 ಲಕ್ಷ ರೂ. ದೇಣಿಗೆ ನೀಡುವುದಾಗಿ ದೂಡಾ ಅಧ್ಯಕ್ಷ ಕೆ.ಎಂ. ಸುರೇಶ್ ಹೇಳಿದರು.**
**ನಗರದಲ್ಲಿ ಆಟೋ ಓಡಿಸುತ್ತಿದ್ದ ನಾನು ಎಲ್ಲರ ಸಹಕಾರ, ಪ್ರೋತ್ಸಾಹದಿಂದ ಇಂದು 2 ವಿದ್ಯಾಸಂಸ್ಥೆಗಳನ್ನು ನಡೆಸುತ್ತಿದ್ದೇನೆ. ಈ ಸಂಸ್ಥೆಗಳ ಪರವಾಗಿ 1 ಲಕ್ಷ ರೂ. ನೀಡುವುದಾಗಿ ಹೇಳಿದರು.**

## ಕೆಂಪು ಕೋಟೆಗೆ ಹೆಚ್ಚಿನ ರಕ್ಷಣೆ

### ಮುಖ ಗುರುತಿಸುವ ಕ್ಯಾಮರಾಗಳ ಅಳವಡಿಕೆ

ನವದೆಹಲಿ, ಆ. 13 – 75ನೇ ಸ್ವಾತಂತ್ರ್ಯ ದಿನಾಚರಣೆಗಾಗಿ ಕೆಂಪು ಕೋಟೆಗೆ ಹಲವು ಸುತ್ತುಗಳ ಭದ್ರತೆ ಕಲ್ಪಿಸಲಾಗಿದೆ. ಮುಖ ಗುರುತಿಸುವ ತಂತ್ರಜ್ಞಾನದ ಕ್ಯಾಮರಾಗಳನ್ನು ಪ್ರವೇಶದ ಬಳಿ ಅಳವಡಿಸಲಾಗಿದೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಕೆಂಪು ಕೋಟೆಯ ಮೇಲೆ ರಾಷ್ಟ್ರ ಧ್ವಜಾರೋಹಣ ನೆರವೇರಿಸಲಿದ್ದಾರೆ.

ಕೆಂಪು ಕೋಟೆಯ ಮೇಲೆ ನಡೆಯಲಿರುವ ಸಮಾರಂಭದಲ್ಲಿ 7 ಸಾವಿರ ಆಹ್ವಾನಿತರು ಭಾಗಿಯಾಗಲಿದ್ದಾರೆ. 10 ಸಾವಿರಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿಯನ್ನು ಕೆಂಪು ಕೋಟೆಯ ಸುತ್ತ ಭದ್ರತೆಗೆ ನಿಯೋಜಿಸಲಾಗಿದೆ.

ಕೆಂಪು ಕೋಟೆಯ ಸುತ್ತಲಿನ ಸೂಕ್ಷ್ಮ ಪ್ರದೇಶಗಳ ತಾರಸಿಗಳ ಮೇಲೆ 400ಕ್ಕೂ ಹೆಚ್ಚು ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಸುತ್ತಲಿನ ಐದು ಕಿ.ಮೀ. ಪ್ರದೇಶದಲ್ಲಿ ಸಮಾರಂಭ ಪೂರ್ಣಗೊಳ್ಳುವವರೆಗೆ ಬಾವುಟ ಹಾರಿಸದಂತೆ ನಿರ್ಬಂಧಿಸಲಾಗಿದೆ.

**ಸ್ವಾತಂತ್ರ್ಯೋತ್ಸವದಲ್ಲಿ 7 ಸಾವಿರಕ್ಕೂ ಹೆಚ್ಚು ಆಹ್ವಾನಿತರು ಭಾಗಿ**

ರಕ್ಷಣಾ ಸಂಶೋಧನಾ ಸಂಸ್ಥೆಯಾದ ಡಿ.ಆರ್.ಡಿ.ಒ. ಅಭಿವೃದ್ಧಿ ಪಡಿಸಿರುವ ಡ್ರೋನ್ ವಿರೋಧಿ ವ್ಯವಸ್ಥೆ ಹಾಗೂ ಇತರೆ ಭದ್ರತಾ ವ್ಯವಸ್ಥೆಗಳನ್ನು ಅಳವಡಿಸಲಾಗಿದೆ.

ಕೆಂಪು ಕೋಟೆಯ ಸುತ್ತ ಕ್ಯಾಮರಾಗಳನ್ನು ಅಳವಡಿಸಲಾಗಿದೆ. ಅವುಗಳ ದೃಶ್ಯಗಳ ಮೇಲೆ ನಿರಂತರ ನಿಗಾ ವಹಿಸಲಾಗುತ್ತಿದೆ. ಮುಖ ಗುರುತಿಸುವ ಕ್ಯಾಮರಾಗಳನ್ನು ಪ್ರವೇಶದ ಬಳಿ (4ನೇ ಪುಟಕ್ಕೆ)

## ಸರ್ಕಾರದಿಂದ ರಾಷ್ಟ್ರಧ್ವಜಗಳ ಮಾರಾಟ ವ್ಯಾಪಾರಿಗಳ ಮಾರಾಟಕ್ಕೆ ಹಿನ್ನಡೆ



ಹರಿಹರ, ಆ. 13 - ಸರ್ಕಾರ ಈ ಬಾರಿ ರಾಷ್ಟ್ರಧ್ವಜಗಳನ್ನು ಮನೆ ಮನೆಗಳಿಗೆ ತಲುಪಿಸುವುದಕ್ಕೆ ಮುಂದಾಗಿದ್ದರಿಂದ ನಮ್ಮ ನಿರೀಕ್ಷೆಗೆ ತಕ್ಕಂತೆ ರಾಷ್ಟ್ರಧ್ವಜಗಳ ವ್ಯಾಪಾರ ನಡೆದಿಲ್ಲ ಎಂದು ರಾಷ್ಟ್ರಧ್ವಜ ವ್ಯಾಪಾರಿ ಜ್ಞಾನೇಶ್ವರ ಹೋವಳೆ ಹೇಳಿದರು.

ಸರ್ಕಾರ 75 ನೇ ಅಮೃತ ಮಹೋತ್ಸವ ಆಚರಣೆ ನಡೆಸುವ ದೃಷ್ಟಿಯಿಂದ ನಾವು ಈ ಬಾರಿ ಕನಿಷ್ಠ 10 ಸಾವಿರಕ್ಕೂ ಹೆಚ್ಚು ರಾಷ್ಟ್ರಧ್ವಜ ಮಾರಾಟ ಮಾಡುವ ಗುರಿಯನ್ನು ಹೊಂದಿದ್ದೆವು. ಆದರೆ ಸರ್ಕಾರ ಕಳಪೆ ಗುಣಮಟ್ಟದ ಮತ್ತು ಕಡಿಮೆ ದರದಲ್ಲಿ ಮನೆಗಳಿಗೆ ತೆರಳಿ ರಾಷ್ಟ್ರಧ್ವಜ ನೀಡಿದೆ ಎಂದವರು ಹೇಳಿದರು.

ಇಲ್ಲಿಯವರೆಗೆ 4 ಸಾವಿರಕ್ಕೂ ಹೆಚ್ಚು ರಾಷ್ಟ್ರಧ್ವಜಗಳನ್ನು ಮಾರಾಟ ಮಾಡಲಾಗಿದೆ. ಹಿಂದೆ 50 ನೇ ಸ್ವಾತಂತ್ರ್ಯ ಮಹೋತ್ಸವ ಸಂದರ್ಭದಲ್ಲಿ 3 ರಾಟೆ ಇಟ್ಟುಕೊಂಡು ಹಗಲು ರಾತ್ರಿ ಎನ್ನದೆ ಶ್ರಮವಹಿಸಿ ಕೆಲಸ ಮಾಡಿ ರಾಷ್ಟ್ರಧ್ವಜ ಹೆಚ್ಚಿನ ಪ್ರಮಾಣದಲ್ಲಿ ಮಾರಾಟ ಮಾಡಿದ್ದೆವು ಎಂದವರು ಹೇಳಿದರು. ನಮ್ಮ ತಂದೆ ದಿವಂಗತ ಕೃಷ್ಣಪ್ಪ ಹೋವಳೆ ಸಹ ಇದೇ ಸಮಯದಲ್ಲಿ ಬಹಳ ಹೆಚ್ಚಿನ ವ್ಯಾಪಾರ ವಹಿವಾಟು ಮಾಡಿಕೊಂಡು ಬಂದಿದ್ದರು ಎಂದು ಹೇಳಿದರು.

## ಜನೋತ್ಸವಕ್ಕೂ ಮುನ್ನ ಸರ್ಕಾರದಲ್ಲಿ ಮಹತ್ತರ ಬದಲಾವಣೆ

**ಸಂಪುಟ ಸಹೋದ್ಯೋಗಿಗಳಿಗೆ ಸಿಎಂ ಬೊಮ್ಮಾಯಿ ಸೂಚನೆ**

ಬೆಂಗಳೂರು, ಆ. 13 - ಜನೋತ್ಸವಕ್ಕೂ ಮುನ್ನ ಸರ್ಕಾರದಲ್ಲಿ ಮಹತ್ತರ ಬದಲಾವಣೆಯಾಗಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ನಿನ್ನೆ ನಡೆದ ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ಅಧಿಕಾರಿಗಳು ಹೊರ ಹೋದ ನಂತರ ಮುಖ್ಯಮಂತ್ರಿಯವರು ತಮ್ಮ ಸಹೋದ್ಯೋಗಿಗಳಿಗೆ ತಿಳಿಸಿದ್ದಾರೆ.

ಆಡಳಿತದಲ್ಲಿ ಯಾವ ರೀತಿ ಬದಲಾವಣೆಯಾಗುತ್ತದೆ ಎಂಬ ಬಗ್ಗೆ ಯಾವುದೇ ಮಾಹಿತಿಯನ್ನು ನೀಡದೇ ಗೌಪ್ಯತೆ ಕಾಪಾಡಿಕೊಂಡಿದ್ದಾರೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸರ್ಕಾರ ಒಂದು ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಜುಲೈ 28 ರಂದು ದೊಡ್ಡ ಬಳ್ಳಾಪುರದಲ್ಲಿ ಜನೋತ್ಸವ ಕಾರ್ಯಕ್ರಮ ನಡೆಸಲು ಬಿಜೆಪಿ ಪಕ್ಷ ನಿರ್ಧರಿಸಿತ್ತು.

ಕಾರಣಾಂತರಗಳಿಂದ ಮುಂದೂಡಲ್ಪಟ್ಟ ಈ ಕಾರ್ಯಕ್ರಮವನ್ನು ಅದೇ ಸ್ಥಳದಲ್ಲಿ ಆಗಸ್ಟ್ 28 ರಂದು ನಡೆಸಲು ನಿರ್ಧರಿಸಿದೆ. ಮುಂಬರುವ ವಿಧಾನಸಭಾ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ವರಿಷ್ಠರು ಪಕ್ಷ ಮತ್ತು ಸರ್ಕಾರದಲ್ಲಿ ಕೆಲ ಬದಲಾವಣೆಗೆ ಮುಂದಾಗಿದ್ದಾರೆ. ಅದು ಯಾವ ರೀತಿ ಎಂಬುದರ ಬಗ್ಗೆ ಪೂರ್ಣ ಮಾಹಿತಿ ಇಲ್ಲವೇ ಸಂದೇಶವಿಲ್ಲ. ಆದರೆ ಕೇಂದ್ರ ಗೃಹ ಸಚಿವ ಅಮಿತ್ ಷಾ ಬಂದ ಸಂದರ್ಭದಲ್ಲಿ ಕೆಲ ಬದಲಾವಣೆಯ ಬಗ್ಗೆ ಸೂಚ್ಯವಾಗಿ ತಿಳಿಸಿದ್ದಾರೆ.

ಸಂಪುಟ ಪುನರ್‌ರಚನೆಯಾಗುತ್ತದೆಯೋ, ವಿಸ್ತರಣೆಯಾಗುತ್ತದೆಯೋ ಇಲ್ಲವೇ ಖಾತೆಗಳ ಬದಲಾವಣೆಯಾಗುತ್ತದೆಯೋ ನನಗೆ ಏನೂ ತಿಳಿಯದು ಎಂದು ಬೊಮ್ಮಾಯಿ ಹೇಳಿದ್ದಾರೆ.

ಆದರೆ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಮಾಡುತ್ತಿರುವ ಬದಲಾವಣೆಗೆ ನಾವೆಲ್ಲರೂ ತಲೆಬಾಗಬೇಕಾಗುತ್ತದೆ. ಇದಕ್ಕೆ ಸಿದ್ಧರಾಗಬೇಕೆಂದು ಸೂಚ್ಯವಾಗಿ (5ನೇ ಪುಟಕ್ಕೆ)

## ಸೋನಿಯಾ ಗಾಂಧಿಗೆ ಮತ್ತೆ ಕೊರೊನಾ ಸೋಂಕು

ನವದೆಹಲಿ, ಆ. 13 – ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿಯವರಲ್ಲಿ ಮತ್ತೆ ಕೊರೊನಾ ಸೋಂಕು ಕಾಣಿಸಿಕೊಂಡಿದ್ದು, ಅವರು ಪ್ರತ್ಯೇಕವಾಗಿದ್ದಾರೆ. ಎರಡು ತಿಂಗಳ ಹಿಂದಷ್ಟೇ ಅವರಲ್ಲಿ ಕೊರೊನಾ ಸೋಂಕು ಕಾಣಿಸಿಕೊಂಡಿತ್ತು.

ಕಳೆದ ವಾರ ಅವರ ಪುತ್ರಿ ಹಾಗೂ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕ ಗಾಂಧಿ ವಾದ್ರಾರಲ್ಲಿ ಸೋಂಕು ಕಾಣಿಸಿಕೊಂಡಿತ್ತು. ಜೂನ್ ತಿಂಗಳಲ್ಲೂ ಸೋನಿಯಾರಿಗೆ ಕೊರೊನಾ ಸೋಂಕು ಬಂದಿತ್ತು. ಆಗ ಅವರನ್ನು ಸರ್ ಗಂಗಾ ರಾಮ್ ಆಸ್ಪತ್ರೆಗೆ ದಾಖಲಿಸಲಾಗಿತ್ತು.

### ಜಗಳೂರು: ಎಪಿಎಂಸಿ ಮಾರುಕಟ್ಟೆಗೆ ಹತ್ತಿ ಬೆಳೆ ಅವಕ ಆರಂಭ

## ಉತ್ತಮ 'ಬೆಲೆ' ನಿರೀಕ್ಷೆಯಲ್ಲಿ ತಾಲ್ಲೂಕಿನ ರೈತರು

ಜಗಳೂರು,ಆ.13- ಪ್ರಸಕ್ತ ಮುಂಗಾರು ಹಂಗಾಮಿನಲ್ಲಿ ಉತ್ತಮ ಮಳೆಯಾಗಿ ರೈತರು ತಾಲೂಕಿನಾದ್ಯಂತ ಹತ್ತಿ ಬೆಳೆಯನ್ನು ಹೆಚ್ಚಾಗಿ ಬಿತ್ತನೆ ಮಾಡಿದ್ದಾರೆ. ಇಂದು ಕೃಷಿ ಉತ್ಪನ್ನ ಮಾರುಕಟ್ಟೆಗೆ ಮುಂಗಾರಿನ ಮೊದಲ ಫಸಲಾಗಿ 'ಹತ್ತಿ' ಹೆಚ್ಚಿನ ಪ್ರಮಾಣದಲ್ಲಿ ಅವಕವಾಗುತ್ತಿದೆ.

ಕಳೆದ ವರ್ಷ ಈರುಳ್ಳಿ ಬೆಳೆ ಹೆಚ್ಚಿನ ಪ್ರಮಾಣದಲ್ಲಿ ಬಿತ್ತನೆಯಾಗಿತ್ತು. ಸಮರ್ಪಕ ಬೆಲೆ ಸಿಗದೇ ರೈತರು ಸಂಕಷ್ಟ ಅನುಭವಿಸಿದ್ದರು. ಈ ವರ್ಷ ಹತ್ತಿ ಬಿತ್ತನೆ ಮಾಡಿ ಲಾಭದ ನಿರೀಕ್ಷೆಯಲ್ಲಿದ್ದಾರೆ.

ಈ ವರ್ಷ ಮುಂಗಾರು ಪೂರ್ವ ಉತ್ತಮ ಮಳೆಯಾಗಿದ್ದರಿಂದ ಹಾಗೂ ಕಳೆದ ವರ್ಷ ಹತ್ತಿಗೆ ಹೆಚ್ಚಿನ ಬೆಲೆ (ಕ್ವಿಂಟಾಲ್‌ಗೆ ರೂ.17000) ಸಿಕ್ಕ ಪರಿಣಾಮವಾಗಿ ಈ ವರ್ಷ ರೈತರು ಹೆಚ್ಚಿನ ಪ್ರಮಾಣದಲ್ಲಿ ಹತ್ತಿ ಬಿತ್ತನೆ ಮಾಡಿದ್ದಾರೆ.



**ಕಳೆದ ವರ್ಷ ಈರುಳ್ಳಿ ಬೆಳೆಯಿಂದ ನಷ್ಟ ಅನುಭವಿಸಿದ್ದ ರೈತರಿಗೆ, ಈ ವರ್ಷ 'ಬಿಳಿ ಬಂಗಾರ'- ಹತ್ತಿ ಫಸಲು ಕೈ ಹಿಡಿಯುವ ಸಂಭವ ಹೆಚ್ಚಾಗಿದೆ.**

ಕೃಷಿ ಇಲಾಖೆಯ ಅಂಕಿ-ಅಂಶಗಳ ಪ್ರಕಾರ ತಾಲೂಕಿನಲ್ಲಿ ಈ ವರ್ಷ ಸುಮಾರು 3500 ಹೆಕ್ಟೇರ್ ಹತ್ತಿ ಬಿತ್ತನೆಯಾಗಿದೆ. ಹಿಂದಿನ ವರ್ಷ ತಾಲ್ಲೂಕಿ ನಾದ್ಯಂತ ಕೇವಲ 1250 ಹೆಕ್ಟೇರ್ ಮಾತ್ರ ಬಿತ್ತನೆಯಾಗಿತ್ತು.

ಕಳೆದ ಒಂದು ವಾರದಿಂದ ತುಂತುರು ಮಳೆಯಾಗುತ್ತಿದ್ದರೂ ಸಹ ಹತ್ತಿ ಬೆಳೆ ಮಾರುಕಟ್ಟೆಗೆ ಬರಲು ಆರಂಭವಾಗಿದೆ. ಉತ್ತಮ ಫಸಲು ಇಳುವರಿ ಬಂದಿದ್ದು, ಬೆಲೆಯೂ ಸಿಗುವ ನಿರೀಕ್ಷೆಯಲ್ಲಿ ತಾಲ್ಲೂಕಿನ ರೈತರು ಇದ್ದಾರೆ. ಕಳೆದ ವರ್ಷ ಈರುಳ್ಳಿ ಬೆಳೆಯಿಂದ ನಷ್ಟ ಅನುಭವಿಸಿ ಕೈ ಸುಟ್ಟುಕೊಂಡಿದ್ದರು. ಈ ವರ್ಷ ಬಿಳಿ ಬಂಗಾರ ಹತ್ತಿ ಫಸಲು ರೈತರ ಕೈ ಹಿಡಿಯುವ ಸಂಭವ ಹೆಚ್ಚಾಗಿದೆ.

ಇಂದು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ವರ್ತಕರು ಮುಂಗಾರಿನ ಪ್ರಥಮ ಫಸಲು ಖರೀದಿಗೆ ತಮ್ಮ ಅಂಗಡಿಗಳನ್ನು ಪೂಜೆ ಮಾಡುವ ಮೂಲಕ ಆರಂಭಿಸಿದರು.ಇಂದು 150 ಕ್ವಿಂಟಾಲ್‌ಗೂ ಹೆಚ್ಚಿನ ಪ್ರಮಾಣದಲ್ಲಿ ಹತ್ತಿ ಬಂದಿತ್ತು. ಪ್ರತಿ ಕ್ವಿಂಟಾಲ್‌ಗೆ ರೂ 9000 ದಿಂದ 12300 ರೂ.ಗಳವರೆಗೆ (5ನೇ ಪುಟಕ್ಕೆ)

### ಪದ್ಮಸಾಲಿ ನೀಲಿ ಕುಮಾರ ಸ್ವಾಮಿ ನಿಧನ



ದಾವಣಗೆರೆ ಎಸ್.ಎಸ್. ಲೇಔಟ್ 'ಎ' ಬ್ಲಾಕ್ 4ನೇ ತಿರುವಿನ (ಎಂ.ಟಿ.ಆರ್. ಹೋಟೆಲ್ ಪಕ್ಕದ ರಸ್ತೆ) ವಾಸಿ, ಪೂಜಾ ಗಾರ್ಮೆಂಟ್ಸ್ ಮಾಲೀಕರಾದ

**ಶ್ರೀ ಪದ್ಮಸಾಲಿ ನೀಲಿ ಕುಮಾರ ಸ್ವಾಮಿ**

ಅವರು, ದಿನಾಂಕ 13.08.2022ರ ಶನಿವಾರ ರಾತ್ರಿ 10.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಕುಮಾರಸ್ವಾಮಿ, ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಪದ್ಮಸಾಲಿ ನೀಲಿ ಹನುಮಂತಪ್ಪ ಅವರ ಹಿರಿಯ ಪುತ್ರ. ಮೃತರಿಗೆ ಸುಮಾರು 62 ವರ್ಷ ವಯಸ್ಸಾಗಿತ್ತು. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ, ಸಹೋದರರು, ಸಹೋದರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 14.08.2022ರ ಭಾನುವಾರ ಮಧ್ಯಾಹ್ನ 2 ಗಂಟೆಗೆ ಪಿ.ಬಿ. ರಸ್ತೆಯ ವೈಕುಂಠಧಾಮದಲ್ಲಿ ನೆರವೇರಿಸಲಾಗುವುದು.

-ದುಃಖತಪ್ತ ಕುಟುಂಬ ವರ್ಗ ಮತ್ತು ಸಿಬ್ಬಂದಿ ವರ್ಗ
**ಪೂಜಾ ಗಾರ್ಮೆಂಟ್ಸ್, ಪೂಜಾ ಟೆಕ್ಸ್‌ಟೈಲ್ಸ್, ಪೂಜಾ ಡ್ರೆಸ್ ಲ್ಯಾಂಡ್**
ಚಾಮರಾಜಪೇಟೆ ಸರ್ಕಲ್, ದಾವಣಗೆರೆ. ಮೊ. 97436-33937, 98443 -34492

**JOB OFFER**
SOFTWARE DEVELPOERS
Minimum Knowledge about
1) PHP 2) HTML
3) J Query 4) C S S
5) Java Script
Minimum one year Experience
Contact No.
94498 36164
Interview Place
**OPTICAL PARADISE**
AVK College Road,
Davangere - 577 002

# ರಾಣೇಬೆನ್ನೂರು ಕಾಂಗ್ರೆಸ್‌ನಿಂದ ಅಮೃತೋತ್ಸವ ಕುಪ್ಪೇಲೂರಿನಿಂದ ತುಮ್ಮಿನಕಟ್ಟೆಗೆ ಪಾದಯಾತ್ರೆ



ರಾಣೇಬೆನ್ನೂರು, ಆ. 13- ಸುಮಾರು 40 ಅಣೆಕಟ್ಟೆ ಗಳನ್ನು ಕಟ್ಟಿ ಎಲ್ಲರ ಹಸಿವು ಇಂಗಿಸುವ ಯೋಜನೆಗಳನ್ನು ರೂಪಿಸಿ, ಬಡವರ, ಹಿಂದುಳಿದವರ, ಹರಿಜನ-ಗಿರಿಜನರ ಉದ್ಧಾರದ ಜೊತೆಗೆ ದೇಶವನ್ನ ಪ್ರಗತಿಯತ್ತ ಕೊಂಡೊಯ್ದ ಕಾಂಗ್ರೆಸ್ ಪಕ್ಷದ ಆಡಳಿತ ಸಂಪದ್ಭರಿತವಾಗಿತ್ತು ಎಂದು ಮಾಜಿ ಸಭಾಪತಿ ಕೆ.ಬಿ. ಕೋಳಿವಾಡ ಹೇಳಿದರು.

ಕಾಂಗ್ರೆಸ್ ತನ್ನ ಆಡಳಿತಾವಧಿಯಲ್ಲಿ ದೇಶಕ್ಕೆ ಮಾಡಿದ ಎಲ್ಲ ಸಂಪತ್ತನ್ನು ಬಿಜೆಪಿ ಸರ್ಕಾರ ಮಾರಾಟ ಮಾಡುತ್ತಿದೆ ಎಂದು ಆರೋಪಿಸಿದ ಕೆ.ಪಿ.ಸಿ.ಸಿ. ಕಾರ್ಯದರ್ಶಿ ರಾಮಪ್ಪ, ಎಲ್ಲ ಭಾಗ್ಯಗಳನ್ನು ಕೊಟ್ಟು ಜನಪರ ಚಿಂತನೆ ಮಾಡುವುದು ಕಾಂಗ್ರೆಸ್ ಪಕ್ಷದ ಸಿದ್ಧಾಂತವಾದರೆ ಸುಳ್ಳು ಹೇಳುವುದು ಬಿಜೆಪಿ ಹಾಗೂ ಪ್ರಧಾನಿ ಮೋದಿ ಅವರ ಸಿದ್ಧಾಂತ ಎಂದರು.

ಈರ್ವರೂ ಇಂದು ತಾಲ್ಲೂಕು ಕಾಂಗ್ರೆಸ್ ಸಂಘಟಿಸಿದ ಕುಪ್ಪೇಲೂರ ಗ್ರಾಮದಿಂದ ಹೊರಟ ಸ್ವಾತಂತ್ರದ ಅಮೃತ ಮಹೋತ್ಸವಕ್ಕೆ ಚಾಲನೆ ನೀಡಿ ಮಾತನಾಡಿದರು.

ಸ್ವಾತಂತ್ರ್ಯ ಸೇನಾನಿ ಮೆಣಸಿನಹಾಳ ತಿಮ್ಮನಗೌಡರ ಕರ್ಮ ಹಾಗೂ ಬಲಿದಾನದ ಕುಪ್ಪೇಲೂರಿನ ಈ ಪುಣ್ಯಭೂಮಿಯಿಂದ ಕಾಂಗ್ರೆಸ್ ಪಕ್ಷ ಅಮೃತ ಮಹೋತ್ಸವ ವನ್ನು ಆಚರಿಸುತ್ತಿದೆ. ಸ್ವಾತಂತ್ರ್ಯ ಯೋಧರ ಹೋರಾಟ ಹಾಗೂ ಬಲಿದಾನದಿಂದ ನೆಮ್ಮದಿಯ ಬದುಕು ಕಾಣುತ್ತಿದ್ದು, ಕಾಂಗ್ರೆಸ್ ಪಕ್ಷ ಯೋಧರನ್ನು ಗೌರವದಿಂದ ಕಾಣುತ್ತಿದೆ ಎಂದು ಪ್ರಕಾಶ ಕೋಳಿವಾಡ, ಬಸನಗೌಡ ಮರದ, ಸಣ್ಣತಮ್ಮಪ್ಪ ಬಾರ್ಕಿ, ಜಟ್ಟೆಪ್ಪ ಕರೇಗೌಡ ಹೇಳಿದರು.

ಕುಪ್ಪೇಲೂರು, ಸಣ್ಣಸಂಗಾಪುರ, ಬಡಾಬಸಾಪುರ, ಮಾಳನಾಯ್ಕನಹಳ್ಳಿ, ತಿಮ್ಮೇನಹಳ್ಳಿ. ಮೆಣಸಿನಹಾಳದ ಮೂಲಕ 20 ಕಿ.ಮೀ ಅಂತರದ ತುಮ್ಮಿನಕಟ್ಟೆಯಲ್ಲಿ ಕೊನೆ ಗೊಳ್ಳುವ ಪಾದಯಾತ್ರೆಯಲ್ಲಿ ನಗರ ಹಾಗೂ ಗ್ರಾಮೀಣ ಭಾಗದ ಮುಖಂಡರು, ಕಾರ್ಯಕರ್ತರು ಹಾಗೂ ಅಭಿಮಾನಿಗಳು ಪಾಲ್ಗೊಂಡಿದ್ದರು.

# ಸಂಸದ ಸಿದ್ದೇಶ್ವರ ಧ್ವಜಾರೋಹಣ




ದಾವಣಗೆರೆ, ಆ.13- ಆಜಾದಿ ಕಾ ಅಮೃತ್ ಮಹೋತ್ಸವದ ಅಂಗವಾಗಿ ದೇಶಾದ್ಯಂತ ಮೂರು ದಿನಗಳ ಕಾಲ ಹಮ್ಮಿಕೊಂಡಿರುವ 'ಹರ್ ಘರ್ ತಿರಂಗ' ಅಭಿಯಾನದ ಅಂಗವಾಗಿ ಸಂಸದ ಜಿ.ಎಂ.ಸಿದ್ದೇಶ್ವರ ಅವರು ಭೀಮಸಮುದ್ರ ದಲ್ಲಿರುವ ತಮ್ಮ ಮನೆಯ ಮೇಲೆ ತಮ್ಮ ಕುಟುಂಬ ಸದಸ್ಯರೊಂದಿಗೆ ಇಂದು ರಾಷ್ಟ್ರ ಧ್ವಜಾರೋಹಣ ನೆರವೇರಿಸಿದರು. ಈ ಸಂದರ್ಭದಲ್ಲಿ ಪುತ್ರ ಜಿ.ಎಸ್. ಅನಿತ್‌ಕುಮಾರ್, ಚಿತ್ರದುರ್ಗ ಎಪಿಎಂಸಿ ಮಾಜಿ ಅಧ್ಯಕ್ಷ ಗುರುಮೂರ್ತಿ, ನಟರಾಜ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಜಿಲ್ಲಾ ರೈತ ಮೋರ್ಚಾದಿಂದ ತ್ರಿವರ್ಣ ಧ್ವಜ ಯಾತ್ರೆ

ಜಿಲ್ಲಾ ಬಿಜೆಪಿ ರೈತ ಮೋರ್ಚಾದಿಂದ 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಟ್ರ್ಯಾಕ್ಟರ್ ಜಾಥಾ ಮತ್ತು ತ್ರಿವರ್ಣ ಧ್ವಜ ಯಾತ್ರೆ ಕಾರ್ಯಕ್ರಮವು ಇಂದು ಇಂದು ಬೆಳಿಗ್ಗೆ 10 ಗಂಟೆಗೆ ಹಮ್ಮಿಕೊಳ್ಳಲಾಗಿದೆ.

ಜಿಲ್ಲಾ ರೈತ ಮೋರ್ಚಾ ಅಧ್ಯಕ್ಷ ಲೋಕಿಕೆರೆ ನಾಗರಾಜ್ ಅಧ್ಯಕ್ಷತೆಯಲ್ಲಿ ನಡೆಯುವ ಮೆರವಣಿಗೆಯು ವಿದ್ಯಾನಗರದ ಗಾಂಧಿ ವೃತ್ತದಿಂದ ಪ್ರಾರಂಭವಾಗಿ ರಾಜಬೀದಿಗಳಲ್ಲಿ ಸಂಚರಿಸಲಿದೆ.



# ನಗರದಲ್ಲಿ ಇಂದು ಗುರುರಾಯರ ಆರಾಧನೆ

ಕೆ.ಬಿ. ಬಡಾವಣೆ ದೀಕ್ಷಿತ್ ರಸ್ತೆಯಲ್ಲಿರುವ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ನಡೆಯುತ್ತಿರುವ ಶ್ರೀ ಗುರು ರಾಯರ 351ನೇ ಆರಾಧನಾ ಮಹೋತ್ಸವದಲ್ಲಿ ಇಂದು ಪ್ರಾತಃಕಾಲದಿಂದ ವಿವಿಧ ಪೂಜಾ ಕಾರ್ಯಕ್ರಮಗಳು ನಡೆಯಲಿವೆ. ಬೆಳಿಗ್ಗೆ 10.30 ರಿಂದ ಗುರುಸಾರ್ವಭೌಮರ ಮಹಾರಥೋತ್ಸವ ಜರುಗಲಿದೆ.

# ಸ್ವಾತಂತ್ರ್ಯಕ್ಕಾಗಿ ತ್ಯಾಗ, ಬಲಿದಾನ ಮಾಡಿದವರ ಸಾಕ್ಷ್ಯ ಚಿತ್ರ ಪ್ರದರ್ಶನ

**ನಗರದಲ್ಲಿ ಇಂದು - ನಾಳೆ**

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ವತಿಯಿಂದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಸ್ವಾತಂತ್ರ್ಯಕ್ಕಾಗಿ ತ್ಯಾಗ, ಬಲಿದಾನ ಮಾಡಿದವರ ಸ್ಮರಣಾ ಸಾಕ್ಷ್ಯ ಚಿತ್ರ ಪ್ರದರ್ಶನವನ್ನು ಇಂದು ಮತ್ತು ನಾಳೆ ಕುವೆಂಪು ಕನ್ನಡ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

ಇಂದು ಸಂಜೆ 5 ಗಂಟೆಗೆ ಡಾ. ಎ. ಚನ್ನಪ್ಪ ಕಾರ್ಯಕ್ರಮವನ್ನು ಉದ್ಘಾಟಿಸುವರು. ಬಿ. ವಾಮದೇವಪ್ಪ ಅಧ್ಯಕ್ಷತೆ ವಹಿಸುವರು. ಅತಿಥಿಗಳಾಗಿ ವಿಶ್ವನಾಥ ಪಿ. ಮುದಜ್ಜಿ, ಬಿ. ಪಾಲಾಕ್ಷಿ, ಟಿ ಅಂಬಣ್ಣ ಆಗಮಿಸುವರು. ಮಾಜಿ ಯೋಧ ಮನೋಹರ್ ಶಂಕರ್ ಮಹೇಂದ್ರಕರ್ ಅವರಿಗೆ ಸನ್ಮಾನಿಸಲಾಗುವುದು.

ನಂತರ ದಾವಣಗೆರೆ ಉತ್ತರ ವಲಯದ ಶಾಲಾ ಮಕ್ಕಳಿಂದ, ದಾವಣಗೆರೆ ದಕ್ಷಿಣ ವಲಯದ ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳಿಂದ ನೃತ್ಯೋತ್ಸವ ನಡೆಯುವುದು.

# ನಗರದಲ್ಲಿ ಇಂದು ಕಾಂಗ್ರೆಸ್ ಪಾದಯಾತ್ರೆ

ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಅಂಗವಾಗಿ ಕೆಪಿಸಿಸಿ ಆದೇಶದ ಮೇರೆಗೆ ದಾವಣಗೆರೆ ಉತ್ತರ ನಗರ ಬ್ಲಾಕ್ ಕಾಂಗ್ರೆಸ್ ವತಿಯಿಂದ ವಿವಿಧ ಕಡೆಗಳಲ್ಲಿ ಇಂದು ಪಾದಯಾತ್ರೆಯನ್ನು ಹಮ್ಮಿಕೊಳ್ಳಲಾಗಿದೆ.

ಸ್ವಾತಂತ್ರ್ಯ ಹೋರಾಟದಲ್ಲಿ ಕಾಂಗ್ರೆಸ್ ಪಕ್ಷದ ತ್ಯಾಗ ಬಲಿದಾನದ ಅಮೋಘ ಸಾಧನೆಗಳನ್ನು ಜನತೆಗೆ ತಿಳಿಸುವ ಉದ್ದೇಶ ದಿಂದ ಕಾಂಗ್ರೆಸ್ ಪಕ್ಷ ಈ ಪಾದಯಾತ್ರೆ ಯನ್ನು ಹಮ್ಮಿಕೊಂಡಿದೆ ಎಂದು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ತಿಳಿಸಿದ್ದಾರೆ. ಇಂದು ಸಂಜೆ 4 ಗಂಟೆಗೆ ನಗರ ಉತ್ತರ ಬ್ಲಾಕ್ ಕಾಂಗ್ರೆಸ್‌ನಿಂದ ಅಧ್ಯಕ್ಷ ಕೆ. ಜಿ.ಶಿವಕುಮಾರ್ ಅಧ್ಯಕ್ಷತೆಯಲ್ಲಿ ಆರಂಭವಾಗುವ ಈ ಪಾದಯಾತ್ರೆಗೆ ಮಾಜಿ ಸಚಿವ ಎಸ್. ಎಸ್.ಮಲ್ಲಿಕಾರ್ಜುನ್ ಚಾಲನೆ ನೀಡಲಿದ್ದಾರೆ.

ಈ ಪಾದಯಾತ್ರೆಯಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ.ಮಂಜಪ್ಪ ಸೇರಿದಂತೆ ಕೆಪಿಸಿಸಿ ಸದಸ್ಯರುಗಳು, ಜಿಲ್ಲಾ ಕಾಂಗ್ರೆಸ್ ಪದಾಧಿಕಾರಿಗಳು ಭಾಗವಹಿಸಲಿದ್ದಾರೆ.

# ನಗರದಲ್ಲಿ ಇಂದು ಕರ್ನಾಟಕ ಪ್ರಿಂಟರ್ಸ್ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯ ಸಭೆ

ಕರ್ನಾಟಕ ಪ್ರಿಂಟರ್ಸ್ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯ ದಾವಣಗೆರೆ ಶಾಖೆ ಪ್ರಗತಿಯ ಕುರಿತಂತೆ ಇಂದು ಬೆಳಿಗ್ಗೆ 11.30ಕ್ಕೆ ಶ್ರೀ ಶಿವಯೋಗಾಶ್ರಮದ ಆವರಣದಲ್ಲಿರುವ ಶ್ರೀ ಜಯದೇವ ವಿದ್ಯಾರ್ಥಿ ನಿಲಯದಲ್ಲಿ ಚಿಂತನ-ಮಂಥನ ನಡೆಯಲಿದೆ ಎಂದು ಶಾಖೆಯ ವ್ಯವಸ್ಥಾಪಕರಾದ ಶ್ರೀಮತಿ ಎಂ.ಸಿ.ಗೀತಾ ತಿಳಿಸಿದ್ದಾರೆ.

ಎಸ್. ಶಿವರಾಂ ಸಭೆಯ ಅಧ್ಯಕ್ಷತೆ ವಹಿಸಲಿದ್ದು, ಜಿಲ್ಲಾ ಮುದ್ರಣಕಾರರ ಸಂಘದ ಅಧ್ಯಕ್ಷ ಎ.ಎನ್. ಪ್ರಕಾಶ್, ಕರ್ನಾಟಕ ಪ್ರಿಂಟರ್ಸ್ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿರ್ದೇಶಕ ಕಣಕುಪ್ಪಿ ಮುರುಗೇಶಪ್ಪ, ಪ್ರಭಾರ ಕಾರ್ಯದರ್ಶಿ ಶ್ರೀಮತಿ ಜಿ.ವಿಜಯ ಮುಖ್ಯ ಅತಿಥಿಗಳಾಗಿದ್ದಾರೆ. ಸಂಘದ ಸದಸ್ಯರು ಸಭೆಯಲ್ಲಿ ಭಾಗವಹಿಸುವಂತೆ ಅವರು ಕೋರಿದ್ದಾರೆ.



# ಶಾಮನೂರಿನ ಶ್ರೀ ಆಂಜನೇಯ ಸ್ವಾಮಿಗೆ ಶ್ರಾವಣ ಮಾಸದ ವಿಶೇಷ ಪೂಜೆ

ದಾವಣಗೆರೆ,ಆ.13- ಶಾಮನೂರಿನ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಶ್ರಾವಣ ಮಾಸದ ಪ್ರಯುಕ್ತ ಇಂದು ಶ್ರೀ ಸ್ವಾಮಿಗೆ ವಿಶೇಷ ಅಲಂಕಾರ, ಪೂಜೆ ನೆರವೇರಿಸಲಾಗಿತ್ತು. ಈ ಪ್ರಯುಕ್ತ ಅನ್ನ ಸಂತರ್ಪಣೆ ನಡೆಯಿತು.

# ಹರ್‌ಘರ್ ತಿರಂಗ ಕಾರ್ಯಕ್ರಮಕ್ಕೆ ಚಾಲನೆ



**38ನೇ ವಾರ್ಡ್**

ದಾವಣಗೆರೆ, ಆ.13- ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಪ್ರಯುಕ್ತ 38ನೇ ವಾರ್ಡಿನಲ್ಲಿ ಹರ್ ಘರ್ ತಿರಂಗಾ ಕಾರ್ಯಕ್ರಮವನ್ನು ಬಿಜೆಪಿ ಮುಖಂಡ ವಿನಯ್ ದಿಳ್ಯೆಪ್ಪ ಅವರ ನೇತೃತ್ವದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಈ ಸಂದರ್ಭದಲ್ಲಿ ಕೆ.ದೇವೇಂದ್ರಪ್ಪ, ಎನ್.ಮರಿಗೌಡರ್, ಕರೂರ್, ಪಿ.ಬಸವನಗೌಡ, ಬಸವಂತಪ್ಪ, ಜಂಬುನಾಥಪ್ಪ, ಓಂಕಾರಪ್ಪ, ಜಗದೀಶ್, ಶಿವಶಂಕರ್, ಹಾಲೇಶಪ್ಪ ಪೂಜಾರ್, ರಜಪೂತ್, ರಾಜಪ್ಪ, ಮಂಜುಳಮ್ಮ ಕುಮಾರಪ್ಪ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

# ಮನೆ-ಮನೆಯಲ್ಲಿ ತ್ರಿವರ್ಣ ಧ್ವಜ ಅಭಿಯಾನ



ದಾವಣಗೆರೆ, ಆ.13- ಸ್ವಾತಂತ್ರ್ಯದ ಅಮೃತ ಮಹೋತ್ಸವದ ಹಿನ್ನೆಲೆಯಲ್ಲಿ ದೇಶದಾದ್ಯಂತ ನಡೆಯಲಿರುವ 'ಪ್ರತಿ ಮನೆ ಮನೆಯಲ್ಲೂ ತ್ರಿವರ್ಣ ಧ್ವಜ' ಅಭಿಯಾನದ ಅಂಗವಾಗಿ ಜಿಲ್ಲಾ ಭಾಜಪ ರೈತ ಮೋರ್ಚಾ ವತಿಯಿಂದ ಅಧ್ಯಕ್ಷರಾದ ನಾಗರಾಜ್ ಲೋಕಿಕೆರೆ ಅವರು ಮನೆ ಮನೆಗೆ ತೆರಳಿ ತ್ರಿವರ್ಣ ಧ್ವಜವನ್ನು ನೀಡಿದರು. ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ಸದಸ್ಯರಾದ ಶ್ರೀಮತಿ ಗೀತಾ ದಿಳ್ಯಪ್ಪ, ರೈತ ಮೋರ್ಚಾ ಪದಾಧಿಕಾರಿಗಳು, ಮಹಿಳಾ ಮುಖಂಡರು, ಕಾರ್ಯಕರ್ತರು ಮತ್ತು ಇತರ ಪ್ರಮುಖರು ಉಪಸ್ಥಿತರಿದ್ದರು.

# ಸ್ವಾತಂತ್ರ್ಯ ಹೋರಾಟಗಾರರಿಗೆ ಸನ್ಮಾನ



ದಾವಣಗೆರೆ, ಆ. 13- 75ನೇ ವರ್ಷದ ಸ್ವಾತಂತ್ರ್ಯೋತ್ಸವ ಅಮೃತ ಮಹೋತ್ಸವದ ಅಂಗವಾಗಿ ಜಿಲ್ಲಾಡಳಿತದಿಂದ ಇಲ್ಲಿನ ಗಾಂಧಿನಗರದಲ್ಲಿರುವ ಸ್ವಾತಂತ್ರ್ಯ ಹೋರಾಟರರನ್ನು ಅವರ ನಿವಾಸಕ್ಕೆ ತೆರಳಿ ಗೌರವಿಸಲಾಯಿತು. ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ಅವರು ಸ್ವಾತಂತ್ರ್ಯ ಹೋರಾಟಗಾರರನ್ನು ಸನ್ಮಾನಿಸಿದರು. ಜಿಲ್ಲಾಧಿಕಾರಿ ಶಿವಾನಂದ ಕಪಾಸಿ, ಮೇಯರ್ ಶ್ರೀಮತಿ ಜಯಮ್ಮ ಗೋಪಿನಾಯ್ಕ, ಉಪ ಮೇಯರ್ ಶ್ರೀಮತಿ ಗಾಯತ್ರಿ ಬಾಯಿ, 6ನೇ ವಾರ್ಡಿನ ಸದಸ್ಯ ಎಲ್. ಡಿ. ಗೋಣೆಪ್ಪ, ಮುಖಂಡ ಸಂತೋಷ್ ಜಾಧವ್, ಎಲ್. ಜಿ. ಬಸವರಾಜ್ ಮತ್ತು ಇತರರು ಉಪಸ್ಥಿತರಿದ್ದರು.

## ಐದನೇ ವರ್ಷದ ಪುಣ್ಯಸ್ಮರಣೆ



**ದಿ. ಹುಸೇನ್ ಬೇಗ್**

ಮರಣ : 14.08.2017

ನೀವು ನಮ್ಮನ್ನಗಲಿ ಇಂದಿಗೆ ಐದು ವರ್ಷಗಳಾದವು.
ಸದಾ ನಿಮ್ಮ ಸವಿನೆನಪು, ಆದರ್ಶ, ಮಾರ್ಗದರ್ಶನದಲ್ಲಿರುವ,
ನಿಮ್ಮ ಸ್ಮರಣೆಯಲ್ಲಿರುವ

**ತಂದೆ : ಕಲೀಲ್ ಬೇಗ್, ತಾಯಿ : ಅನೀಫಾ ಬಿ.**

**ಅಣ್ಣ : ರೆಹಮತುಲ್ಲಾ ಬೇಗ್**

**ಸಹೋದರರು ಹಾಗೂ ಸಹೋದರಿಯರು**

**ಹೋಟೆಲ್ ಕಲೀಲ್ ಬೇಗ್, ಸಿಬ್ಬಂದಿ ವರ್ಗ, ದಾವಣಗೆರೆ.**

## ಬಾವಿಹಾಳ್ ರವಿಶಂಕರ್, ನಾಗವೇಣಿ ನಿಧನ



ಬಾವಿಹಾಳ್ ಬಿ.ಆರ್. ರವಿಶಂಕರ್



ಶ್ರೀಮತಿ ನಾಗವೇಣಿ

ದಾವಣಗೆರೆ ತಾಲ್ಲೂಕು ಬಾವಿಹಾಳ್ ಗ್ರಾಮದ ವಾಸಿ ದಿ.ರುದ್ರಪ್ಪ ಬಾಡದ ನಾಗಮ್ಮ ಇವರ ಪುತ್ರರಾದ ಬಿ.ಆರ್. ರವಿಶಂಕರ್ 35 ವರ್ಷ, ಸೊಸೆ ಶ್ರೀಮತಿ ನಾಗವೇಣಿ 32 ವರ್ಷ ಇವರುಗಳು ದಿನಾಂಕ 13.8.2022ರ ಶನಿವಾರ ಸಂಜೆ 5.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಮೃತರು ತಾಯಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 14.8.2022ರ ಭಾನುವಾರ ಮಧ್ಯಾಹ್ನ 12 ಗಂಟೆಗೆ ದಾವಣಗೆರೆ ತಾಲ್ಲೂಕು ಬಾವಿಹಾಳ್ ಗ್ರಾಮದಲ್ಲಿ ನೆರವೇರಿಸಲಾಗುವುದು.

**ದು:ಖತಪ್ತ ಕುಟುಂಬ ವರ್ಗ.- 70197-35235**




ನೋಂದಣಿ ಸಂಖ್ಯೆ: ಡಿ.ಆರ್. ಡಿ.ವಿ.ಜಿ. ಆರ್.ಎಸ್.ಆರ್/ಸೌನೋ/2652/2013-14 ದಿನಾಂಕ 12.7.2013

## ಹರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ,

# 56/11ಬಿ, ಮೊದಲನೇ ಮಹಡಿ, ಹಳೆ ಮಾಧ್ಯಮಿಕ ಶಾಲೆ ರಸ್ತೆ, ದಾವಣಗೆರೆ-577001., ದೂರವಾಣಿ: 08192 233700



## 10ನೇ ಸಾಮಾನ್ಯ ಸಭೆಯ ನೋಟಿಸ್

*ಮಾನ್ಯ ಸದಸ್ಯರುಗಳ ಗಮನಕ್ಕೆ*

ಸಹಕಾರಿಯ 2021-22ನೇ ಸಾಲಿನ 10ನೇ ಸಾಮಾನ್ಯ ಸಭೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಸಿ.ಉಮಾಪತಿ ಇವರ ಘನ ಅಧ್ಯಕ್ಷತೆಯಲ್ಲಿ ದಿನಾಂಕ 10/09/2022ರ ಶನಿವಾರ ಬೆಳಿಗ್ಗೆ 11.00 ಗಂಟೆಗೆ ಸರಿಯಾಗಿ ಶ್ರೀಮತಿ ಮಾಗಾನಹಳ್ಳಿ ಬಸಮ್ಮ ಬಸಪ್ಪ ಕಲ್ಯಾಣ ಮಂಟಪ. ಶ್ರೀ ಬಕ್ಕೇಶ್ವರ ದೇವಸ್ಥಾನ ಆವರಣ. ಚೌಕಿಪೇಟೆ, ದಾವಣಗೆರೆ-577001 ಇಲ್ಲಿ ಕರೆಯಲಾಗಿದೆ. ಈಗಾಗಲೇ ಅರ್ಹ ಸದಸ್ಯರುಗಳಿಗೆ ಸಾಮಾನ್ಯ ಸಭೆಯ ಆಹ್ವಾನ ಪತ್ರಿಕೆಯನ್ನು ಅಂಚೆ ಮೂಲಕ ಕಳುಹಿಸಲಾಗಿದೆ. ಅದಾಗ್ಯೂ ಈ ಆಹ್ವಾನ ಪತ್ರಿಕೆ ಮೂಲಕ ಅರ್ಹ ಸದಸ್ಯರು ವಾರ್ಷಿಕ ಸಾಮಾನ್ಯ ಸಭೆಗೆ ಹಾಜರಾಗಬೇಕೆಂದು ಆಡಳಿತ ಮಂಡಳಿಯ ಪರವಾಗಿ ವಿನಂತಿಸಲಾಗಿದೆ.

| ಕ್ರ.ಸಂ | ವಿವರ | 2019-20 | 2020-21 | 2021-22 |
|---|---|---|---|---|
| 1 | ಸದಸ್ಯರ ಸಂಖ್ಯೆ | 2543 | 2658 | 2731 |
| 2 | ಷೇರು ಬಂಡವಾಳ | 1,01,56,464.00 | 1,13,97,408.00 | 1,15,82,144.00 |
| 3 | ನಿಧಿಗಳು/ಸ್ವಂತ ಬಂಡವಾಳ | 93,28,520.16 | 1,24,32,906.58 | 1,34,71,579.16 |
| 4 | ಸದಸ್ಯರ ಠೇವಣಿಗಳು | 8,49,02,253.21 | 10,01,57,130.21 | 11,64,93,695.21 |
| 5 | ಸದಸ್ಯರಿಗೆ ವಿತರಿಸಿದ ಸಾಲಗಳು | 6,53,30,780.00 | 7,83,40,132.00 | 7,18,68,622.00 |
| 6 | ಹೂಡಿಕೆಗಳು | 2,10,06,000.00 | 3,90,06,000.00 | 7,15,06,000.00 |
| 7 | ದುಡಿಯುವ ಬಂಡವಾಳ | 10,86,53,287.37 | 12,93,38,269.37 | 14,98,48,023.37 |
| 8 | ನಿವ್ವಳ ಲಾಭ | 34,51,501.42 | 40,17,287.58 | 40,97,679.00 |
| 9 | ಲಾಭಾಂಶ ನೀಡಿಕೆ | 10% | 10% | ಉದ್ದೇಶಿತ 10% |

ಸ್ಥಳ: ದಾವಣಗೆರೆ
ದಿನಾಂಕ 12.08.2022

ಆಡಳಿತ ಮಂಡಳಿಯ ಅಪ್ಪಣೆಯ ಮೇರೆಗೆ ಸಹಿ/-
(ಚನ್ನಮಲ್ಲಿಕಾರ್ಜುನ ಕೆ), ಕಾರ್ಯದರ್ಶಿ

ಸದಸ್ಯರಿಗೆ ವಿಶೇಷ ಸೂಚನೆ : ಇತ್ತೀಚಿನ ಸೌಹಾರ್ದ ಸಹಕಾರಿ ಕಾಯ್ದೆಯ ತಿದ್ದುಪಡಿ ಪ್ರಕಾರ :- ಹಿಂದಿನ ಐದು ವಾರ್ಷಿಕ ಸಾಮಾನ್ಯ ಸಭೆಗಳ ಪೈಕಿ ಕನಿಷ್ಠ ಎರಡು ವಾರ್ಷಿಕ ಸಾಮಾನ್ಯ ಸಭೆಗಳಿಗೆ ಹಾಜರಾಗಿಲ್ಲದಿದ್ದರೆ ಅಥವಾ ಹಿಂದಿನ ಐದು ಸಹಕಾರ ವರ್ಷಗಳಲ್ಲಿ ಪೈಕಿ ಯಾವುದೇ ಎರಡು ಸಹಕಾರ ವರ್ಷಗಳಿಗಾಗಿ ಉಪವಿಧಿ ನಿರ್ದಿಷ್ಟಪಡಿಸಿರುವ ಕನಿಷ್ಠ ಮಟ್ಟದ ಸಹಕಾರಿಯ ಸೇವೆಯನ್ನು ಬಳಸಿಕೊಂಡಿಲ್ಲದಿದ್ದರೆ; ಅಂತಹ ಸದಸ್ಯರು ಸಭೆ, ಚುನಾವಣೆಗಳಲ್ಲಿ ಪಾಲ್ಗೊಳ್ಳಲು ಮತ್ತು ಮತ ಚಲಾಯಿಸಲು ಮತ್ತು ಕಾಯ್ದೆಯ ಪ್ರಕರಣ 20ರನ್ವಯ ಮುಂದಿನ ಒಂದು ವರ್ಷದವರೆಗೆ ಸದಸ್ಯರಾಗಿ ಮುಂದುವರೆಯಲು ಅನರ್ಹರಾಗುತ್ತಾರೆ.

2021-22ನೇ ಸಾಲಿನ ಎಸ್.ಎಸ್.ಎಲ್.ಸಿ. ಮತ್ತು ದ್ವಿತೀಯ ಪಿ.ಯು.ಸಿ ಯಲ್ಲಿ ಶೇ 85 ಕ್ಕಿಂತ ಹೆಚ್ಚು ಅಂಕ ಗಳಿಸಿದ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರಕ್ಕಾಗಿ ಅರ್ಜಿ ಸಲ್ಲಿಸುವವರು ದಿನಾಂಕ 01-09-2022ರೊಳಗೆ ಸಹಕಾರಿ ಕಛೇರಿಯಲ್ಲಿ ಅರ್ಜಿ ಸಲ್ಲಿಸಲು ಕೋರಲಾಗಿದೆ.


## 10ನೇ ವರ್ಷದ ಪುಣ್ಯಸ್ಮರಣೆ



**ಶ್ರೀಮತಿ ಬಸಮ್ಮ ಮಾಗಿ**

(ದಿ|| ವೀರಬಸಪ್ಪ ಮಾಗಿ ಅವರ ಧರ್ಮಪತ್ನಿ)

*"ನಿಮ್ಮ ನೆನಪು ಸದಾ ಹಚ್ಚ ಹಸಿರು*
*ನಿಮ್ಮ ಆದರ್ಶವೇ ನಮಗೆ ದಾರಿದೀಪ*
*ನಿಮ್ಮ ಮಾರ್ಗದರ್ಶನವೇ ನಮಗೆ ಚೇತನ"*

ಸದಾ ಸ್ಮರಿಸುವ...

- ಶ್ರೀಮತಿ ಲತಾ ಮತ್ತು ಪಂಚಾಕ್ಷರಿ
- ಶ್ರೀಮತಿ ರೂಪಾ ಮತ್ತು ಕೈಲಾಸ್ ಬಾಬು ಮಾಗಿ
- ಶ್ರೀಮತಿ ದಾನೇಶ್ವರಿ ಮತ್ತು ಎಂ.ವಿ. ಜಯಪ್ರಕಾಶ್ ಮಾಗಿ
- ಶ್ರೀಮತಿ ಶಿವಲೀಲಾ ಮತ್ತು ರಾಜೇಶ್

ಮೊಮ್ಮಕ್ಕಳು :
✦ ಮಮತ ✦ ಗಣೇಶ್ ✦ ನಿಖಿಲ್ ಮಾಗಿ
✦ ಹರ್ಷ ಮಾಗಿ ✦ ಕಿಶೋರ್ ಮಾಗಿ
✦ ದಿಶಾ ✦ ಶ್ರೇಯಸ್

ಹಾಗೂ ಮಾಗಿ ಕುಟುಂಬ ವರ್ಗದವರು, ದಾವಣಗೆರೆ

- **ರೈಸ್ ಕಾರ್ನರ್**
- **ಹರ್ಷ ಕಮರ್ಷಿಯಲ್ಸ್**
- **ಜೆ.ಪಿ. ಎಂಟರ್‌ಪ್ರೈಸಸ್**

**ಗುಜರಿ ಲೈನ್ ಚೌಕಿಪೇಟೆ ಹಿಂಭಾಗ, ದಾವಣಗೆರೆ.**

## ಧೂಳೆಹೊಳೆ ಮಂಜಮ್ಮ ನಿಧನ



ದಾವಣಗೆರೆ ಕೆ.ಟಿ.ಜೆ ನಗರ 1ನೇ ಮೇನ್, 2ನೇ ಕ್ರಾಸ್ ವಾಸಿ ದಿ. ಬಸಪ್ಪನವರ ಧರ್ಮಪತ್ನಿ ಹಾಗೂ ಅಕ್ಕಿ ವರ್ತಕ ಶಿವಕುಮಾರ (ಬಾಬು) ಇವರ ತಾಯಿ ಧೂಳೆಹೊಳೆ ಮಂಜಮ್ಮ (65) ಇವರು ದಿನಾಂಕ 13.8.2022ರ ಶನಿವಾರ ಸಂಜೆ 6 ಗಂಟೆಗೆ ನಿಧನರಾದರು. ಓರ್ವ ಪುತ್ರ, ಸೊಸೆ, ಮೊಮ್ಮಗ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 14.8.2022ರ ಭಾನುವಾರ ಮಧ್ಯಾಹ್ನ 12 ಗಂಟೆಗೆ ಶಾಮನೂರು ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

# ಮಲೇಬೆನ್ನೂರಿನಲ್ಲಿ ಇಂದು ಬೈಕ್ ರ್‍ಯಾಲಿ

ಸ್ವಾತಂತ್ರ್ಯದ 75ನೇ ವರ್ಷದ ಅಮೃತ ಮಹೋತ್ಸವದ ಅಂಗವಾಗಿ 'ಹರ್ ಘರ್ ತಿರಂಗಾ' ಅಭಿಯಾನದ ಹಿನ್ನೆಲೆಯಲ್ಲಿ ಹರಿಹರ ತಾಲ್ಲೂಕು ಗ್ರಾಮಾಂತರ ಬಿಜೆಪಿ ವತಿಯಿಂದ ಇಂದು ಬೆಳಿಗ್ಗೆ 10.30 ರಿಂದ ಪಟ್ಟಣದ ನೀರಾವರಿ ಇಲಾಖೆಯಿಂದ ಜನಜಾಗೃತಿ ಮೂಡಿಸುವ ಬೈಕ್ ರ್‍ಯಾಲಿ ಹಮ್ಮಿಕೊಳ್ಳಲಾಗಿದೆ ಎಂದು ಹರಿಹರ ತಾ. ಗ್ರಾ. ಬಿಜೆಪಿ ಅಧ್ಯಕ್ಷ ಹಿಂಡಸಘಟ್ಟಿ ಲಿಂಗರಾಜ್ ಪ್ರಧಾನ ಕಾರ್ಯದರ್ಶಿ ಆದಾಪುರ ವೀರೇಶ್ ಅವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

|| ಶ್ರೀ ಮೈಲಾರಲಿಂಗೇಶ್ವರ ಪ್ರಸನ್ನ || || ಶ್ರೀ ಕೆಂಭಾವಿ ಬಸವಣ್ಣ ಪ್ರಸನ್ನ||



## ಕೈಲಾಸ ಸಮಾರಾಧನೆ ಆಹ್ವಾನ

ದಾವಣಗೆರೆ ಸಿಟಿ ಕೆ.ಬಿ. ಬಡಾವಣೆ ವಾಸಿ
**ಶ್ರೀಮತಿ ಗೌರಮ್ಮ ಮತ್ತು ಮಕ್ಕಳು**
ಮಾಡುವ ವಿಜ್ಞಾಪನೆಗಳು.
ದಿ. 11.08.2022ನೇ ಗುರುವಾರ
ಬೆಳಿಗ್ಗೆ 11.00ಕ್ಕೆ ನನ್ನ ಪೂಜ್ಯ ಪತಿಯವರಾದ
**ಶ್ರೀ ಗಣಪತಿ ಸಿದ್ದಪ್ಪ ಕೋಟೆಹಾಳ್**
**(ಜಿ.ಎಸ್. ಕೋಟೆಹಾಳ್)**
ಶಿವೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**ಕೈಲಾಸ ಸಮಾರಾಧನೆಯನ್ನು ದಿನಾಂಕ : 15.08.2022ನೇ ಸೋಮವಾರ ಬೆಳಿಗ್ಗೆ 10.30ಕ್ಕೆ ಮೃತರ ಸ್ವಗೃಹ ಕೆ.ಬಿ. ಬಡಾವಣೆ, ದಾವಣಗೆರೆಯಲ್ಲಿ**
ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : **ಮೃತರ ಧರ್ಮಪತ್ನಿ ಶ್ರೀಮತಿ ಗೌರಮ್ಮ ಮತ್ತು ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ತೋಟಗಂಟಿ ವಂಶಸ್ಥರು, ಕೋಟೆಹಾಳ್ ವಂಶಸ್ಥರು ಹಾಗೂ ಬಂಧು-ಮಿತ್ರರು.**

## ಭಾವಪೂರ್ಣ ಶ್ರದ್ಧಾಂಜಲಿ



ಪೂಜಾ ಗಾರ್ಮೆಂಟ್ಸ್ ಮಾಲೀಕರೂ,
ನಮ್ಮ ಆತ್ಮೀಯ ಸ್ನೇಹಿತರೂ ಆದ
**ಶ್ರೀ ಪದ್ಮಸಾಲಿ**
**ನೀಲಿ ಕುಮಾರಸ್ವಾಮಿ**
ಅವರು ದಿನಾಂಕ 13.08.2022ರಂದು ನಿಧನರಾಗಿದ್ದು, ಶ್ರೀಯುತರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥನೆ.

**ಲ. ಎನ್.ಆರ್. ನಾಗಭೂಷಣರಾವ್,** ಅಧ್ಯಕ್ಷರು
**ಲ. ಕಣವಿ ನಟರಾಜ್,** ಕಾರ್ಯದರ್ಶಿ
**ಲ. ಎಸ್.ಕೆ. ಮಲ್ಲಿಕಾರ್ಜುನ್,** ಖಜಾಂಚಿ
**ಲ.ಭೀಮಾನಂದ ಶೆಟ್ಟಿ,** ಸಹ ಕಾರ್ಯದರ್ಶಿ
**ಲ. ಎಸ್. ಓಂಕಾರಪ್ಪ,** ವಲಯಾಧ್ಯಕ್ಷರು
**ಲ. ದೇವರಮನೆ ನಾಗರಾಜ್,** ಜಿಲ್ಲಾ ಛೇರ್ಮನ್
**ಲ. ಇ.ಎಂ. ಮಂಜುನಾಥ,** ಅಧ್ಯಕ್ಷರು, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ
ಪದಾಧಿಕಾರಿಗಳು, ಸರ್ವ ಸದಸ್ಯರು, **ಲಯನ್ಸ್ ಕ್ಲಬ್, ದಾವಣಗೆರೆ.**



Eswar Digitronics
SINCE 1951
Happpy 75th
ANNIVERSARY &
FREEDOM SALE
70 YEARS OF TRUST
15 August Independence Day
FREE HOME DELIVERY
BAJAJ FINSERV
ZERO INTEREST
ZERO DOWNPAYMENT
CASH BACK UPTO 10,000/-
1 EMI FREE
SONY OLED
65" 6,500/- EMI PER MONTH
MODEL NO - XR65A80K
STARTS FROM - 2,56,490/-*
INSTANT CASH BACK UPTO 9,000/-
SAMSUNG
75" 6,990/- EMI PER MONTH
MODEL NO - 75BU8000
STARTS FROM - 1,89,990/-*
INSTANT CASH BACK UPTO 9,000/-
LG LED
55" 2,999/- EMI PER MONTH
STARTS FROM - 52,990/-*
INSTANT CASH BACK UPTO 12,000/-
SONY
75" 7,500/- EMI PER MONTH
MODEL NO - 75X80K
STARTS FROM - 2,29,900/-*
INSTANT CASH BACK UPTO 9,000/-
Haier
75" 7,500/- EMI PER MONTH
MODEL NO - 75K6600HQGA
STARTS FROM - 1,39,900/-*
INSTANT CASH BACK UPTO 6,000/-
SAMSUNG FAMILY HUB
700 LTR
SIDE BY SIDE
INSTANT CASH BACK UPTO 12,000/-
STARTS FROM - 93,200/-*
BOSCH
658 LTR
INSTANT CASH BACK UPTO 10,000/-
STARTS FROM - 72,990/-*
LG
687 LTR
INSTANT CASH BACK UPTO 9,000/-
STARTS FROM - 86,500/-*
Haier
578 LTR
INSTANT CASH BACK UPTO 6,000/-
STARTS FROM - 59,900/-*
BOSCH
658 LTR
UPTO 10% INSTANT CASH BACK UPTO 2,000/-
MIXER FREE
STARTS FROM - 27,000/-*
SAMSUNG
FRONT LOAD W/M 8 KG
INSTANT CASH BACK UPTO 9,000/-
STARTS FROM - 37,900/-*
BOSCH
9 KG
INSTANT CASH BACK UPTO 7,500/-
STARTS FROM - 46,900/-*
LG
8 KG
INSTANT CASH BACK UPTO 9,000/-
STARTS FROM - 38,500/-*
BOSCH
6.5 KG
INSTANT CASH BACK UPTO 3,000/-
STARTS FROM - 17,000/-*
Whirlpool
6.5 KG
INSTANT CASH BACK UPTO 2,000/-
STARTS FROM - 15,300/-*
BOSCH CHIMNY HOB
STARTS FROM - 35,000/-*
FABER CHIMNY HOB
MIXER FREE
STARTS FROM - 11,990/-*
SAMSUNG LG Godrej
STARTS FROM - 5,999/-*
morphy richards smart ideas for your home BAJAJ
STARTS FROM - 3,999/-*
LLOYD MITSUBISHI ELECTRIC Cooling and Heating Solutions DAIKIN
STARTS FROM - 23,999/-*
+ FREE INSTALLATION
PHILIPS
UPTO 15% OFF
APPLIANCES
PHILIPS BOSCH Preethi BAJAJ Panasonic ideas for life
UPTO 40% OFF
MIXER GRINDER
BAJAJ Prestige
UPTO 40% OFF
WET GRINDER
WATER PURIFIER
KENT EUREKA FORBES BLUE STAR
UPTO 25% OFF
COOKWARE
COOKER UPTO 25% OFF
TAVA
*T&C APPLY
SONY SAMSUNG BOSCH Haier LG Whirlpool Godrej IFB PHILIPS KENT EUREKA FORBES FABER
Eswar Digitronics Since 1951
Eswar
SRI MARULASIDDESHWARA COMPLEX NH-13, NEAR BUS-STAND
CHANNAGIRI - +91 90086 63411
# 8 & 9, SRI MURUGARAJENDRA COMPLEX,
OPP. JAYADEVA PETROL BUNK, HADADI ROAD,
DAVANGERE - 08192 253411 | +91 90088 33411

# ವಾರ ಭವಿಷ್ಯ

**ದಿನಾಂಕ : 14.08.2022 ರಿಂದ 20.08.2022**
**- ಜಯತೀರ್ಥಾಚಾರ್ ವಡೇರ್, ದಾವಣಗೆರೆ.**

**ಮೇಷ (ಅಶ್ವಿನಿ, ಭರಣಿ, ಕೃತ್ತಿಕಾ)**
**(ಚೂ.ಚೇ.ಚೋ.ಲ.ಲಿ.ಉ.ಲೇ.ಲೊ.ಅ.)**

ಹಮ್ಮಿಕೊಂಡಿರುವ ಹತ್ತು ಹಲವು ಕಾರ್ಯಗಳಲ್ಲಿ ಎಲ್ಲವೂ ನಡೆಯುತ್ತದೆ ಎಂಬ ಭ್ರಮೆಯಿಂದ ಹೊರಬನ್ನಿ. ಅವುಗಳಲ್ಲಿ ಕೆಲವೊಂದು ಹಿನ್ನಡೆಯಾಗಿ ನಿರಾಸೆಯುಂಟುಮಾಡಬಹುದು. ಅತಿಯಾದ ಮೋಜು, ನಿರಂತರ ಪ್ರಯಾಣದಿಂದ ಆರೋಗ್ಯದ ಮೇಲೆ ಪರಿಣಾಮ. ಈಡೇರಿಸಲಾಗದ ಕೋರಿಕೆಗಳಿಂದ ಮಡದಿ ಮಕ್ಕಳಿಂದ ಕುಹಕದ ಮಾತು ಕೇಳಬೇಕಾದೀತು. ಕೃಷಿ ಸಂಬಂಧಿ ಕೆಲಸಗಲ್ಲಲಿ ತೊಡಗಿಕೊಂಡವರಿಗೆ ಹೆಚ್ಚಿನ ಆದಾಯ. ಆಸ್ತಿಗೆ ಸಂಬಂಧಿಸಿದ ವಿಚಾರದಲ್ಲಿ ತಾಳ್ಮೆಯಿಂದ ವರ್ತಿಸಿ. ಆರಕ್ಷಕ ಠಾಣೆಯಲ್ಲಿ ಕೆಲಸ ಮಾಡುವವರು ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ, ಅಮೂಲ್ಯ ದಾಖಲೆ ಕಲೆ ಹಾಕುವರು. ಭಾನು, ಸೋಮ, ಮಂಗಳ ಶುಭ ದಿನಗಳು.

**ವೃಷಭ (ಕೃತ್ತಿಕಾ, 2,3,4, ರೋಹಿಣಿ, ಮೃಗ 1,2)**
**(ಇ.ಉ.ಎ.ಒ.ವ.ವಿ.ವು.ವೆ.ವೋ)**

ಅವ್ಯವಸ್ಥಿತ ಹಣಕಾಸಿನ ಪರಿಸ್ಥಿತಿ ಈ ವಾರ ಸುಧಾರಿಸಲಿದೆ. ಮನೆ ಸದಸ್ಯರಿಗೆ ನೀವೇ ಹೊಂದಿಕೊಂಡು ಹೋಗಲು ಪ್ರಯತ್ನಿಸಿ. ವ್ಯಾಜ್ಯಕ್ಕೆ ಸಂಬಂಧಿಸಿದ ಮೊಕದ್ದಮೆಗಳು ನಿಮ್ಮ ಪರವಾಗಿ ಮುಂದೆ ಹೋಗಲಿವೆ. ಸಾಧ್ಯವಿದ್ದಲ್ಲಿ ರಾಜೀ-ಪಂಚಾಯ್ತಿ ಮೂಲಕ ಬಗೆಹರಿಸಿಕೊಳ್ಳಲು ಪ್ರಯತ್ನಿಸಿ. ವ್ಯಾಪಾರದಲ್ಲಿ ಸಾಮೂಹಿಕ ಸನ್ನಿಗೆ ಒಳಗಾಗಿ ತಪ್ಪು ನಿರ್ಧಾರ ತೆಗೆದುಕೊಳ್ಳುವಿರಿ. ವೈದ್ಯ ವೃಂದದವರಿಗೆ ಸಾಮೂಹಿಕವಾಗಿಯೇ ವರ್ಗಾವರ್ಗಿಯಾಗುವ ಸನ್ನಿವೇಶ ಬರಬಹುದು. ಅನುಕೂಲಕರ ವಾತಾವರಣದಿಂದಾಗಿ ಸಣ್ಣಪುಟ್ಟ ಸಾಲಗಳು ತೀರಲಿವೆ. ಸಹೋದ್ಯೋಗಿಗಳೊಂದಿಗೆ ಸ್ನೇಹ ಗಟ್ಟಿಯಾಗಲಿದೆ. ಬುಧ, ಗುರು, ಶುಕ್ರ ಶುಭ ದಿನಗಳು.

**ಮಿಥುನ (3,4, ಆರಿದ್ರಾ, ಪುನರ್ವಸು 1,2,3)**
**(ಕ.ಕಿ.ಕು.ಘ, ಙ, ಛ.ಕೆ.ಕೋ.ಹ.)**

ಮನೆಯಲ್ಲಿರುವ ಅನುಭವಿಗಳಾದ ಹಿರಿಯರು ಹೇಳಿದಂತೆ ಕೇಳದೇ ಹೋದಲ್ಲಿ ಕೌಟುಂಬಿಕ ಸಮಸ್ಯೆ ಕೊನೆಯವರೆಗೂ ಕಗ್ಗಂಟಾಗಿಯೇ ಉಳಿಯಬಹುದು. ಇಷ್ಟು ದಿನಗಳ ಕಾಲ ಸಮಾಜ ಸೇವೆಯಲ್ಲಿ ತೊಡಗಿಕೊಂಡ ಗಣ್ಯರಿಗೆ ರಾಜಕೀಯ ಪ್ರವೇಶಿಸಲು ಅತ್ಯುತ್ತಮ ಅವಕಾಶ ತಾನಾಗಿಯೇ ಬರಲಿದೆ. ವಿದ್ಯಾರ್ಥಿಗಳ ಶ್ರಮಕ್ಕೆ ತಕ್ಕ ಫಲಿತಾಂಶ ಸಿಗಲಿದೆ. ಗೆಳೆತನದ ಸೋಗಿನಲ್ಲಿ ಮೋಸ ಹೋಗುವ ಸಾಧ್ಯತೆ. ಎಚ್ಚರಿಂದಿರಿ. ದ್ರವ ಅಥವಾ ರಸ ಪದಾರ್ಥಗಳ ವ್ಯಾಪಾರಿಗಳಿಗೆ ವಹಿವಾಟು ಹೆಚ್ಚಲಿದೆ. ನಿಮಗೆ ಉದ್ಯೋಗ ನೀಡಿದ ಸಂಸ್ಥೆಯಿಂದಲೇ ಹೆಚ್ಚಿನ ತರಬೇತಿಗೆ ವಿದೇಶಕ್ಕೆ ಹೋಗುವ ಅವಕಾಶ ಬರಲಿದೆ. ಚಿಕ್ಕಮಕ್ಕಳ ಬಗ್ಗೆ ಸಾಕಷ್ಟು ಎಚ್ಚರಿದಂದಿರಿ. ಭಾನು, ಬುಧ, ಗುರು ಶುಭ ದಿನಗಳು.

**ಕರ್ಕಾಟಕ (ಪುನ 4, ಪುಷ್ಯ, ಆಶ್ಲೇಷ)**
**(ಹಿ.ಹು.ಹೆ.ಹೊ.ಡ.ಡಿ.ಡು.ಡೆ.ಡೋ)**

ಇಷ್ಟು ದಿನ ಮಂದಗತಿಯಲ್ಲಿದ್ದ ಆರ್ಥಿಕ ಸ್ಥಿತಿಗತಿ ಸುಧಾರಣೆ. ಹಾಗೆಂದ ಮಾತ್ರಕ್ಕೆ ದುಂದುವೆಚ್ಚ ಸಲ್ಲದು. ಹೊಸದಾಗಿ ಸೇರಿಕೊಳ್ಳಲಿರುವ ಪಾಲುದಾರರ ಉತ್ತಮ ಸಲಹೆಯಿಂದ ವ್ಯವಹಾರ ವೃದ್ಧಿಸಲಿದೆ. ಉತ್ತಮ ಭಾಷಣಕಾರರಿಗೆ, ಸಾಹಿತಿಗಳಿಗೆ ಅಭಿಪ್ರಾಯ ತಿಳಿಸಲು ಸೂಕ್ತ ವೇದಿಕೆ ದೊರೆಯಲಿದೆ. ವೈದ್ಯಕೀಯ ಕ್ಷೇತ್ರದಲ್ಲಿ ಸಂಶೋಧನೆಗೆ ತೊಡಗಿಕೊಂಡವರಿಗೆ ಉತ್ತಮ ಫಲಿತಾಂಶ. ಸರ್ಕಾರದಿಂದ ಅಭಿನಂದನೆ ಸಲ್ಲಲಿದೆ. ಆರಕ್ಷಣಾ ಇಲಾಖೆಯಲ್ಲಿ ಕೆಲಸ ಮಾಡುವವರಿಗೆ ಮೇಲಾಧಿಕಾರಿಗಳಿಂದ ಉಂಟಾಗುವ ಕಿರಿಕಿರಿಯಿಂದ ಕರ್ತವ್ಯದಲ್ಲಿ ಶ್ರದ್ಧೆ ಕಡಿಮೆಯಾಗಲಿದೆ. ಸೋಮ, ಮಂಗಳ, ಗುರು ಶುಭ ದಿನಗಳು.

**ಸಿಂಹ ( ಮಘ, ಪುಬ್ಬ, ಉತ್ತರ 1)**
**(ಮ.ಮಿ.ಮು.ಮೋ.ವೆ.ಟ.ಟಿ.ಟು.ಟೆ)**

ಈ ಹಿಂದೆ ಹದಗೆಟ್ಟಿದ್ದ ಹಿರಿಯರ ಆರೋಗ್ಯದಲ್ಲಿ ಸಾಕಷ್ಟು ಚೇತರಿಕೆ ಕಂಡುಬರಲಿದೆ. ಬೆಲೆಬಾಳುವ ವಸ್ತುಗಳ ಖರೀದಿ ವಿಚಾರ ಬರಿಮಾತಿನಲ್ಲೇ ಮುಕ್ತಾಯವಾಗಲಿದೆ. ಉನ್ನತ ಅಧ್ಯಯನದಲ್ಲಿ ತೊಡಗಿಕೊಂಡಿರುವ ವಿದ್ಯಾರ್ಥಿಗಳಿಗೆ ಸಕಲ ಸೌಲಭ್ಯಗಳು ದೊರೆಯಲಿವೆ. ಖರ್ಚಿನ ವಿಚಾರದಲ್ಲಿ ಕಠಿಣ ನಿರ್ಧಾರ ತೆಗೆದುಕೊಳ್ಳದೇ ಹೋದಲ್ಲಿ ವಿಪರೀತ ಸಾಲ ಮಾಡಬೇಕಾದ ಪ್ರಸಂಗ ಬರಬಹುದು. ಹಣಕಾಸಿನ ಪರಿಸ್ಥಿತಿ ಅಷ್ಟಕ್ಕಷ್ಟೇ.ಸಂಧಿವಾತಕ್ಕೆ ಸಂಬಂಧಿಸಿದಂತೆ ಮೊಣಕಾಲು, ಕೈ ಮೊದಲಾದ ಅನಾರೋಗ್ಯ ಸಮಸ್ಯೆ ನಿಮ್ಮನ್ನು ಹೈರಾಣಾಗಿಸಲಿದೆ. ಮಹಿಳೆಯರಿಗೆ ಉತ್ತಮ ದಿನಗಳು. ಮಹಾಲಕ್ಷ್ಮಿಯನ್ನು ಆರಾಧಿಸಿ.ಭಾನು, ಸೋಮ, ಬುಧ ಶುಭ ದಿನಗಳು.

**ಕನ್ಯಾ (ಉತ್ತರಾ 2,3,4, ಹಸ್ತಾ, ಚಿತ್ತಾ 1,2)**
**(ಟೋ.ಪ.ಪಿ.ಪು.ಷ.ಣ.ಠ.ಪೆ.ಪೋ)**

ನಿಮ್ಮ ಸಂಗಾತಿಯ ವೇತನದಲ್ಲಿ ಸಾಕಷ್ಟು ಹೆಚ್ಚಳವಾಗಲಿದೆ. ಆರ್ಥಿಕ ಸಂಕಷ್ಟ ತಕ್ಕಮಟ್ಟಿಗೆ ಸುಧಾರಿಸಲಿದೆ. ಮತ್ತೊಬ್ಬರ ಬಗ್ಗೆ ಮಾತ್ಸರ್ಯದ ಮಾತುಗಳನ್ನಾಡುವುದರಿಂದ ನಿಮ್ಮ ಘನತೆಗೆ ಪೆಟ್ಟು ಬೀಳಲಿದೆ. ಖಾಸಗಿ ಕಂಪನಿಯಲ್ಲಿರುವ ನೌಕರರಿಗೆ ಮಹಿಳಾ ಮೇಲಾಧಿಕಾರಿಗಳಿಂದ ಉತ್ತಮ ಸಹಕಾರ ದೊರೆಯಲಿದೆ. ಅಪರಿಚಿತರ ಬಣ್ಣದ ಮಾತುಗಳಿಗೆ ಮರುಳಾಗಿ ಹಣಕಾಸಿನ ವಿಚಾರದಲ್ಲಿ ಭಾರಿ ಮೋಸ ಹೋಗುವ ಸಂಭವವಿದೆ. ಹಮ್ಮಿಕೊಂಡಿರುವ ಕೆಲಸಗಳಿಗೆ ಸ್ನೇಹಿತರ ನೆರವು ದೊರೆಯಲಿದೆ. ಚಿಕ್ಕಮಕ್ಕಳ ವಿಚಾರದಲ್ಲಿ, ಹೆಚ್ಚಿನ ಗಮನ ವಹಿಸುವುದು ಮೇಲು. ಸೋದರನ ವಿವಾಹದ ಸಿದ್ಧತೆ ಭರದಿಂದ ಸಾಗಲಿದೆ. ನಿರ್ವಿಘ್ನವಾಗಿ ನೆರವೇರಲು ಗಣಪತಿಯನ್ನು ವಿಶೇಷವಾಗಿ ಆರಾಧಿಸಿ. ಮಂಗಳ, ಬುಧ, ಶುಕ್ರ ಶುಭ ದಿನಗಳು.

**ತುಲಾ (ಚಿತ್ತಾ 3,4, ಸ್ವಾತಿ, ವಿಶಾಖ 1,2,3)**
**(ರ.ರಿ.ರು.ರೆ.ರೊ.ತ.ತಿ.ತು.ತೆ.)**

ಪ್ರತಿಯೊಂದು ಕೂಡ ನಿಮ್ಮ ಇಚ್ಛೆಯಂತೆ ನಡೆಯುತ್ತದೆ ಎಂಬ ಭ್ರಮೆಯಿಂದ ಹೊರಬರಲು ಪ್ರಯತ್ನಿಸಿ. ಇಚ್ಛೆಯಿಲ್ಲದೆ ಮತ್ತೊಬ್ಬರನ್ನು ಮೆಚ್ಚಿಸಲು ಹರಸಾಹಸ ಮಾಡಬೇಡಿ. ನಿರುದ್ಯೋಗಿ ಪದವೀಧರರಿಗೆ, ಸಾಧಾರಣ ವೇತನದ ನೌಕರಿ ದೊರೆಯಲಿದೆ. ಮನೆಯ ಸಡಗರವನ್ನು ಪರಿವಾರದೊಂದಿಗೆ ಸಂಭ್ರಮಿಸುವಿರಿ. ವಿದ್ಯಾರ್ಥಿಗಳು ಉತ್ತಮ ಶ್ರೇಣಿಯಲ್ಲಿ ಪಾಸಾಗಬೇಕೆಂಬ ಕನಸು ನನಸಾಗಲಿದೆ. ಬದುಕಿನಲ್ಲಿ ಆದರ್ಶ ವ್ಯಕ್ತಿಗಳ ತತ್ವವನ್ನು ಅಳವಡಿಸಿಕೊಂಡಲ್ಲಿ ಯಶಸ್ಸಿನ ದಾರಿ ತಾನಾಗಿಯೇ ಕಾಣಲಿದೆ. ಅನಾವಶ್ಯಕವಾಗಿ ಸೋದರನು ಮಾಡಿರುವ ಸಾಲಗಳಿಗೆ ನೀವು ಹೊಣೆಗಾರರಾಗಬೇಕಾದಿತು. ಆರ್ಥಿಕ ಮೂಲವನ್ನು ಕಂಡುಕೊಳ್ಳದೆ ಯಾವುದೇ ಹೊಸ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಹೋಗಬೇಡಿ. ಮಹಿಳೆಯರಿಗೆ ಉತ್ತಮ ದಿನಗಳು. ಬುಧ, ಶುಕ್ರ, ಶನಿ ಶುಭ ದಿನಗಳು.

**ವೃಶ್ಚಿಕ (ವಿಶಾಖ 4, ಅನೂ, ಜೇಷ್ಠ)**
**(ತೊ.ನ.ನಿ.ನು.ನೆ.ನೋ.ಯ.ಯಿ.ಯು.)**

ಹಲವು ಬಾರಿ ಸಮಸ್ಯೆಗಳ ಸುಳಿಯಲ್ಲಿಯಲ್ಲಿ ಸಿಲುಕುವ ನಿಮಗೆ ಈ ವಾರದಿಂದ ಹಂತ ಹಂತವಾಗಿ ಮೇಲೆ ಬರಲು ಮಾರ್ಗೋಪಾಯ ಗೋಚರಿಸಲಿದೆ. ಉನ್ನತಾಧ್ಯಯನ ಮಾಡಿದವರಿಗೆ ಬಯಸಿದಂತಹ ನೌಕರಿ ಸಿಗಲಿದೆ. ವೃತ್ತಿಗೆ ಸಂಬಂಧಿಸಿದಂತಹ ಸಮಸ್ಯೆಗಳಿಗೆ ಅನುಭವಿಗಳಾದ ಹಿರಿಯರಿಂದ ನೆರವು ಪಡೆಯುವುದು ಮೇಲು.ವ್ರಥಾ ತಿರುಗಾಟದಿಂದ ಏನೂ ಪ್ರಯೋಜನವಿಲ್ಲ ಎಂಬುದು ನೆನಪಿರಲಿ. ಅನಾವಶ್ಯಕವಾದ ಖರ್ಚು ವೆಚ್ಚಗಳು, ಕೂಡಿಟ್ಟ ಗಂಟನ್ನು ಕರಗಿಸಲು ಕಾರಣವಾಗುತ್ತದೆ. ಅರಿಯದ ವಿಷಯದ ಮೇಲೆ ಅನಾವಶ್ಯಕವಾಗಿ ಚರ್ಚಿಸಲು ಹೋಗಬೇಡಿ. ರಾಜಕಾರಣಿಗಳ ನೆರವಿನಿಂದ ಸರ್ಕಾರಿ ಕೆಲಸಗಳು ನೆರವೇರಲಿವೆ. ಮತ್ತೊಬ್ಬರನ್ನು ಗೌರವಿಸುವುದನ್ನು ಕಲಿಯಿರಿ. ಸೋಮ, ಮಂಗಳ, ಗುರು ಶುಭ ದಿನಗಳು.

**ಧನಸ್ಸು (ಮೂಲ, ಪೂರ್ವಾಷಾಡ, ಉತ್ತರಾಷಾಡ)**
**(ಯೆ.ಯೋ. ಬ.ಬಿ.ಬು.ಧ.ಫ.ಡ.ಬೆ.)**

ಬದುಕಿನಲ್ಲುಂಟಾದ ಹಲವು ಅನುಭವಗಳು ನಿಮ್ಮಲ್ಲಿರುವ ಕಷ್ಟ ಸಹಿಷ್ಣುತೆ ಹೆಚ್ಚಿಸಲಿದೆ. ರಾಜಕೀಯ ರಂಗದಲ್ಲಿರುವ ಹಲವು ಮೇಲಾಟಗಳು, ಕಾರ್ಯಕರ್ತರನ್ನು ಗೊಂದಲಕ್ಕೀಡು ಮಾಡಲಿವೆ. ಅತಿಯಾಗುತ್ತಿರುವ ದೈಹಿಕ ಶ್ರಮ ನಿಮ್ಮ ಅರೋಗ್ಯದ ಮೇಲೆ ಅಡ್ಡ ಪರಿಣಾಮ ಬೀರಬಹುದು. ಆತ್ಮೀಯರೊಬ್ಬರ ಅಗಲುವಿಕೆ ನಿಮ್ಮನ್ನು ಚಿಂತೆಗಿಡು ಮಾಡಲಿದೆ. ಮನೆಯಲ್ಲಿ ನಡೆಯಲಿರುವ ದೇವತಾ ಕಾರ್ಯಗಳಲ್ಲಿ ಶ್ರದ್ಧೆಯಿಂದ ಭಾಗವಹಿಸುವುದರ ಜೊತೆಗೆ ಹೆಚ್ಚಿನ ದೇಣಿಗೆ ನೀಡುವಿರಿ. ಲೆಕ್ಕಪರಿಶೋಧಕರಿಗೆ ಹೆಚ್ಚಿನ ಬೇಡಿಕೆ ಬರಲಿದೆ. ಹಣಕಾಸಿನ ಪರಿಸ್ಥಿತಿ ಸಾಧಾರಣವಾಗಿರುವುದರಿಂದ ಮಡದಿ ಮಕ್ಕಳ ಕೋರಿಕೆ ವಿಚಾರವನ್ನು ಕೆಲಕಾಲ ಮುಂದೂಡಬೇಕಾಗುತ್ತದೆ.ಕುಲದೇವತಾರಾಧನೆ ಮಾಡುವುದರ ಜೊತೆಗೆ ಅನ್ನದಾನ ಮಾಡಿ. ಭಾನು, ಗುರು, ಶನಿ ಶುಭ ದಿನಗಳು.

**ಮಕರ (ಉತ್ತರಾಷಾಢ 2,3,4, ಶ್ರವಣ, ಧನಿಷ್ಠಾ 1,2)**
**(ಜೊ.ಜ.ಜಿ.ಜೆ.ಶಿ.ಶು.ಶೇ.ಶೋ.ಗ.ಗಿ)**

ಹಣದ ಹರಿವು ಹೆಚ್ಚಾಯಿತೆಂದ ಮಾತ್ರಕ್ಕೆ ಅರಿವಿಲ್ಲದ ಕಡೆ ಹೂಡಿಕೆ ಮಾಡುವುದರಿಂದ ಹೆಚ್ಚಿನ ನಷ್ಟ ಅನುಭವಿಸಬೇಕಾದಿತು. ಅಪರಿಚಿತರೊಂದಿಗೆ ಮಾಡುವ ಪ್ರೇಮ, ಪ್ರೀತಿ, ಅನಾಹುತ ಉಂಟುಮಾಡುವ ಮೊದಲೇ ಎಚ್ಚೆತ್ತುಕೊಳ್ಳುವುದು ಮೇಲು.ಧಾರ್ಮಿಕ ಕಾರ್ಯಗಳಲ್ಲಿ ತೊಡಗಿಕೊಂಡವರಿಗೆ ಸಾಮಾಜಿಕ ಸಂಘ-ಸಂಸ್ಥೆಗಳಿಂದ ಸನ್ಮಾನವಾಗಲಿದೆ. ಉನ್ನತಾಧ್ಯಯನ ಮಾಡಬಯಸುವವರಿಗೆ ಸಮಾಜದಿಂದ ಹಣಕಾಸಿನ ನೆರವು ದೊರೆಯಲಿದೆ. ಶಸ್ತ್ರಚಿಕಿತ್ಸಾ ವೈದ್ಯರಿಗೆ ಬೇಡಿಕೆ ಹೆಚ್ಚುವುದರೊಂದಿಗೆ ಆದಾಯವೂ ವೃದ್ಧಿಸಲಿದೆ. ಪಾಲುದಾರಿಕೆ ವ್ಯವಹಾರದಲ್ಲಿ ಬರಬಹುದಾದ ಗೊಂದಲಗಳನ್ನು ಸಾಧ್ಯವಾದಷ್ಟುಬೇಗನೇ ಪರಿಹರಿಸಿಕೊಳ್ಳಿ. ಅವಿವಾಹಿತರಿಗೆ ಕಂಕಣ ಬಲ ಕೂಡಿಬರಲಿದೆ. ಸೋಮ, ಬುಧ, ಶನಿ ಶುಭ ದಿನಗಳು.

**ಕುಂಭ (ಧನಿಷ್ಠಾ, ಶತಭಿಷಾ, ಪೂರ್ವಾಭಾದ್ರ 1,2,3)**
**(ಗು.ಗೆ.ಗೊ.ಸ.ಸಿ.ಸು.ಸೆ.ಸೋ.ದ)**

ಬದುಕಿನಲ್ಲಿ ಬದಲಾವಣೆ ಸಹಜವೇ ಆಗಿರುವುದರಿಂದ ಸಾಧ್ಯವಾದಷ್ಟು ಹೊಂದಿಕೊಂಡು ಹೋಗಲು ಪ್ರಯತ್ನಿಸಿ. ಬಹಳ ದಿನಗಳಿಂದಲೂ ಬಗೆಹರಿಯದೇ ಇದ್ದ ಆಸ್ತಿವಿವಾದವೊಂದು, ಹಿರಿಯರ ಮಧ್ಯಸ್ಥಿಕೆಯಲ್ಲಿ ಸುಸೂತ್ರವಾಗಿ ಬಗೆಹರಿಯಲಿದೆ.ತಾಳಿದವನು ಬಾಳಿಯಾನು ಎಂಬ ನಾಣ್ಣುಡಿಯನ್ನು ಮರೆಯಬೇಡಿ. ಮಗಳ ವಿವಾಹದ ಮಾತುಕತೆ ಮುಂದೆ ಹೋಗಲಿದೆ. ಇದಕ್ಕಾಗಿ ಚಿಂತೆಬೇಡ. ಅರಿತೋ ಅಥವಾ ಮರೆತೋ ಆಡಿದ ಮಾತು ಅನೇಕ ಸಂಕಷ್ಟಗಳನ್ನು ತರಬಹುದು. ಆರ್ಥಿಕ ಸ್ಥಿತಿಗತಿ ಸಾಧಾರಣವಾಗಿದ್ದರೂ ದೈನಂದಿನ ಜೀವನಕ್ಕೇನೂ ಕೊರತೆಯಿಲ್ಲ. ಚಿಕ್ಕಮಕ್ಕಳ ಆರೋಗ್ಯದ ಕಡೆ ವಿಶೇಷ ಗಮನವಿಡಿ. ಚುಚ್ಚುಮಾತುಗಳನ್ನಾಡದಿರುವುದು ಮನೆತನದ ಹಿತದೃಷ್ಟಿಯಿಂದ ಉತ್ತಮ. ಬುಧ, ಶುಕ್ರ, ಶನಿ ಶುಭ ದಿನಗಳು.

**ಮೀನ (ಪೂರ್ವಾಭಾದ್ರ 4, ಉತ್ತರಾಭಾದ್ರ, ರೇವತಿ)**
**(ದಿ.ದು.ಖ.ಝ.ಥ.ದೆ.ದೋ.ಖ.ಚ.ಚಿ.)**

ಪ್ರತಿಯೊಂದನ್ನೂ ಸಕಾರಾತ್ಮಕವಾಗಿ ಚಿಂತಿಸುವುದರಿಂದ ನಿಮ್ಮಲ್ಲಿ ಆತ್ಮವಿಶ್ವಾಸ ಹೆಚ್ಚಲಿದೆ. ಹೊಸಮನೆ ಕಟ್ಟುವ ಅಥವಾ ಖರೀದಿಸುವ ವಿಚಾರವಿದ್ದಲ್ಲಿ ಮುಂದುವರೆಯಲು ಅಡ್ಡಿಯಿಲ್ಲ. ವಿದೇಶದಲ್ಲಿರುವ ಮಗನಿಂದ ಸಂಪೂರ್ಣ ನೆರವು ದೊರೆಯಲಿದೆ. ಮತ್ತೊಬ್ಬರ ಹಣಕಾಸಿನ ವ್ಯವಹಾರದಲ್ಲಿ ಮಧ್ಯಸ್ಥರಾಗಲು ಹೋಗಬೇಡಿ. ಲೇವಾದೇವಿ ವ್ಯವಹಾರ ಹೆಚ್ಚಿನ ಲಾಭ ತರದಿದ್ದರೂ ನಷ್ಟವಂತೂ ಖಂಡಿತಾ ಇಲ್ಲ. ಮನೆಯ ಗೌರವ ಕಾಪಾಡುವ ಹೆಚ್ಚಿನ ಹೊಣೆಗಾರಿಕೆ ನಿಮ್ಮದಾಗಲಿದೆ. ಅವಿವಾಹಿತರಿಗೆ ಕಂಕಣಬಲ ಕೂಡಿಬಲಿದ್ದು, ತುಸು ತಾಳ್ಮೆಯಿಂದ ಇರಬೇಕಷ್ಟೇ. ವಿದೇಶದಲ್ಲಿರುವ ಮಗನಿಂದ ಆರ್ಥಿಕ ನೆರವು ಸಿಗಲಿದೆ. ಆದರೆ ಅದು ಸದ್ವಿನಿಯೋಗವಾಗುವಂತೆ ನೋಡಿಕೊಳ್ಳಿ. ಗಣೇಶನನ್ನು ಆರಾಧಿಸಿ. ಸೋಮ, ಬುಧ, ಗುರು ಶುಭ ದಿನಗಳು.

**ವಿಶೇಷ ದಿನಗಳು :**

**ದಿ. : 14-8-22 ಭಾನುವಾರ ಶ್ರೀ ರಾಘವೇಂದ್ರ ಸ್ವಾಮಿಗಳ ಉತ್ತರಾರಾಧನೆ.**
**ದಿ.: 15-8-2022 ನೇ ಸೋಮವಾರ ಸಂಕಷ್ಟಹರ ಚತುರ್ಥೀ.**
**ಚಂದ್ರೋದಯ ರಾತ್ರಿ 9-10ಕ್ಕೆ.**
**ದಿ. 19-8-2022 ನೇ ಶುಕ್ರವಾರ ಕೃಷ್ಣ ಜನ್ಮಾಷ್ಟಮಿ.**
**ರಾತ್ರಿ ಚಂದ್ರೋದಯ 12-10ಕ್ಕೆ.**

# ಇಂದು ಮರಾಠ ಪರಿಷತ್‌ನಿಂದ ಪ್ರತಿಭಾ ಪುರಸ್ಕಾರ

ದಾವಣಗೆರೆ, ಆ. 13 - ಕರ್ನಾಟಕ ಕ್ಷತ್ರಿಯ ಮರಾಠ ಪರಿಷತ್ ವತಿಯಿಂದ ನಾಳೆ ದಿನಾಂಕ 14ರ ಭಾನುವಾರ ಬೆಳಿಗ್ಗೆ 10.30ಕ್ಕೆ ನಗರದ ಶ್ರೀ ಕೃಷ್ಣ ಭವಾನಿ ಕಲ್ಯಾಣ ಮಂಟಪದಲ್ಲಿ ಮರಾಠ ಸಮುದಾಯ ಅಭಿವೃದ್ಧಿ ನಿಗಮದಿಂದ ಸಮಾಜಕ್ಕೆ ಸಿಗುವ ಸೌಲಭ್ಯಗಳ ಮಾಹಿತಿ ಕಾರ್ಯಕ್ರಮ ಹಾಗೂ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ. ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭ ಹಮ್ಮಿಕೊಳ್ಳಲಾಗಿದೆ.

ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿರುವ ಜಿಲ್ಲಾ ಮರಾಠ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಡಿ. ಮಾಲತೇಶರಾವ್ ಜಾಧವ್, ಕರ್ನಾಟಕ ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮದಿಂದ ಸಮಾಜದ ಜನರಿಗೆ ಹಲವಾರು ಸೌಲಭ್ಯಗಳನ್ನು ನೀಡಲಾಗುತ್ತಿದೆ. ಈ ಸೌಲಭ್ಯಗಳ ಕುರಿತು ಕಾರ್ಯಕ್ರಮದಲ್ಲಿ ಮಾಹಿತಿ ನೀಡಲಾಗುವುದು ಎಂದರು.

ಕರ್ನಾಟಕ ಕ್ಷತ್ರಿಯ ಮರಾಠ ಪರಿಷತ್ ಜಿಲ್ಲಾ ಅಧ್ಯಕ್ಷ ಜಿ.ಹೆಚ್. ಮರಿಯೋಜಿರಾವ್ ಮಾತನಾಡಿ, ನಿಗಮಕ್ಕೆ ಸರ್ಕಾರ ಎರಡು ಕಂತುಗಳಲ್ಲಿ 100 ಕೋಟಿ ರೂ. ಬಿಡುಗಡೆ ಮಾಡಿದೆ. ಜೀಜಾ ಜಲಭಾಗ್ಯ ಯೋಜನೆ, ಶ್ರೀ ಷಹಾಜಿರಾವ್ ಸಮೃದ್ಧಿ ಯೋಜನೆ ಸೇರಿದಂತೆ ಹಲವು ಯೋಜನೆಗಳನ್ನು ನಿಗಮ ಜಾರಿಗೆ ತರುತ್ತಿದೆ ಎಂದರು.

**ನಿಗಮದ ಸೌಲಭ್ಯಗಳ ಮಾಹಿತಿ ಕಾರ್ಯಕ್ರಮ**

ಕಾರ್ಯಕ್ರಮದ ಉದ್ಘಾಟನೆಯನ್ನು ಕರ್ನಾಟಕ ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮದ ಅಧ್ಯಕ್ಷ ಡಾ. ಎಂ.ಜಿ. ಮುಳೆ ನೆರವೇರಿಸಲಿದ್ದಾರೆ. ಅಧ್ಯಕ್ಷತೆಯನ್ನು ಜಿ.ಹೆಚ್. ಮರಿಯೋಜಿರಾವ್ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಪ್ರಕಾಶ್ ಪಾಕೋಜಿ, ಮರಾಠ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಡಿ. ಮಾಲತೇಶ್‌ರಾವ್ ಜಾಧವ್, ಗೌರವಾಧ್ಯಕ್ಷ ಯಶವಂತರಾವ್ ಜಾಧವ್, ಮಾಜಿ ಮುಖ್ಯ ಕಾರ್ಯದರ್ಶಿ ಅರವಿಂದ ಜಾಧವ್, ಉಪ ಮಹಾಪೌರರಾದ ಗಾಯತ್ರಿಬಾಯಿ ಖಂಡೋಜಿರಾವ್, ಮರಾಠ ಸಮಾಜದ ಮುಖಂಡರಾದ ವಿಜಯೇಂದ್ರ ಜಾಧವ್, ಅನಿತಾಬಾಯಿ ಮಾಲತೇಶ್, ಆಶಾ ಮರಿಯೋಜಿ ರಾವ್, ಎನ್.ಎಸ್. ಕೃಷ್ಣರಾವ್ ಸಾವಂತ್, ಚೇತನ ಶಿವಕುಮಾರ್, ವೀಣಾ ಮೋರೆ, ಗೋಪಾಲ್‌ರಾವ್ ಸಾವಂತ್, ಗೌರಬಾಯಿ ಮೋಹಿತೆ, ಅಣ್ಣೋಜಿರಾವ್, ಹನುಮಂತ್‌ರಾವ್ ಸುರ್ವೆ, ಲಕ್ಷ್ಮಣ್ ರಾವ್ ಜಾಧವ್, ಸತೀಶ್ ರಾವ್ ಭಾಗವಹಿಸಲಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಸಮಾಜದ ಮುಖಂಡರಾದ ಕೃಷ್ಣೋಜಿ ರಾವ್, ಯಲ್ಲಪ್ಪ, ಗೋಪಾಲರಾವ್ ಸಾವಂತ್, ಹನುಮಂತ್ ಸುರ್ವೆ, ಚೇತನ ಶಿವಕುಮಾರ್, ಬಸವರಾಜ್, ಯಲ್ಲಪ್ಪ ಲಮಾಣಿ, ಗಣೇಶ್ ರಾವ್ ಪವಾರ್, ಶ್ರೀನಿವಾಸ ರಾವ್ ಕಾಟೆ, ಪರಶುರಾಮ್ ಸೋಳಂಕಿ, ವೀಣಾ ಮೋರೆ ಮತ್ತಿತರರು ಉಪಸ್ಥಿತರಿದ್ದರು.

# ಸರ್ಕಾರದಲ್ಲಿ ಮಹತ್ತರ ಬದಲಾವಣೆ

(1ನೇ ಪುಟದಿಂದ) ತಿಳಿಸಿದ್ದಾರೆ.

ಮುಖ್ಯಮಂತ್ರಿಯವರೇ ಸ್ವಯಂ ಪ್ರೇರಿತವಾಗಿ ಇಂತಹ ಹೇಳಿಕೆ ನೀಡಿರುವುದು ಸಚಿವರಲ್ಲಿ ಗೊಂದಲ ನಿರ್ಮಾಣ ಮಾಡಿದೆ. ಆದರೆ ಅವರಿಗೂ ಸ್ಪಷ್ಟತೆ ದೊರೆತಿಲ್ಲ. ಕರ್ನಾಟಕದಲ್ಲಿ ನಾಯಕತ್ವ ಬದಲಾವಣೆಯಾಗುತ್ತದೆ ಎಂದು ಪಕ್ಷದ ಒಳಗೆ ಚರ್ಚೆ ನಡೆಯುವ ಸಂದರ್ಭದಲ್ಲೇ ಮುಖ್ಯಮಂತ್ರಿಯವರ ಈ ಹೇಳಿಕೆ ಆಶ್ಚರ್ಯ ತಂದಿದೆ. ಮುಖ್ಯಮಂತ್ರಿಯವರು ಹೇಳುವಂತೆ ಇಡೀ ಸರ್ಕಾರದಲ್ಲಿ ಬದಲಾವಣೆಯಾಗುತ್ತದೆಯೋ ಇಲ್ಲವೇ ಮಂತ್ರಿಮಂಡಲದಲ್ಲಿ ಬದಲಾವಣೆಯಾಗುತ್ತದೆಯೋ ಕಾದು ನೋಡಬೇಕು. ಹೊಸ ಕಾರ್ಯಕ್ರಮ ಅನುಷ್ಠಾನದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಬೊಮ್ಮಾಯಿ ಅವರೇ ಸ್ವಯಂ ಪ್ರೇರಿತವಾಗಿ ಹೇಳಿಕೆ ನೀಡುವ ಮೂಲಕ ರಾಜಕೀಯವಾಗಿದ್ದ ಗೊಂದಲಗಳಿಗೆ ತೆರೆ ಎಳೆದಂತಿದೆ.

28 ರಂದು ನಡೆಯುವ ಜನೋತ್ಸವ ಕಾರ್ಯಕ್ರಮಕ್ಕೆ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ನಡ್ಡಾ, ಬಿಜೆಪಿ ಪ್ರಧಾನ ಕಾರ್ಯದರ್ಶಿ ಅರುಣ್‌ಸಿಂಗ್ ಸೇರಿದಂತೆ ನಾಯಕರು ಭಾಗವಹಿಸಲಿದ್ದಾರೆ ಎನ್ನಲಾಗುತ್ತಿದೆ.


**ಅರಸಿ ಕನ್ಸಲ್ಟೆನ್ಸಿ ಸರ್ವೀಸಸ್**

ನಮ್ಮಲ್ಲಿ ಕಟ್ಟಡ ಪರವಾನಿಗೆ (ದಾವಣಗೆರೆ ಮಹಾನಗರ ಪಾಲಿಕೆ ಮತ್ತು DHUDA), ಬಿಲ್ಡಿಂಗ್ ಪ್ಲಾನ್ (ವಾಸ್ತು ಪ್ರಕಾರ), ಎಸ್ಟಿಮೇಷನ್, ಕನ್‌ಸ್ಟ್ರಕ್ಷನ್ ಮತ್ತು ಮೆಟೀರಿಯಲ್ ಕಾಂಟ್ರಾಕ್ಟ್, ಹಾಗೂ ಅಲಿನೇಷನ್, ಲೇಔಟ್ ಪ್ಲಾನ್ ಮತ್ತು ಅಭಿವೃದ್ಧಿ (Development) ಮಾಡಿಕೊಡಲಾಗುವುದು.

ಸಂಪರ್ಕಿಸಿ : ಪ್ರಿಯಾಂಕ ಜಿ.ಪಿ., ಇಂಜಿನಿಯರ್
+91 70190 70400
8ನೇ ಮೇನ್, 8ನೇ ಕ್ರಾಸ್, ಬ್ಯಾಡಗಿ ಶೆಟ್ರು ಸ್ಕೂಲ್ ಹತ್ತಿರ, ಪಿ.ಜೆ. ಬಡಾವಣೆ, ದಾವಣಗೆರೆ-4.


# ಇಂದು ಭಾವಸಾರ ಸಮಾಜದ ವಧು-ವರ ಸಭೆ

ಭಾವಸಾರ ಕ್ಷತ್ರಿಯ ಸಮಾಜ, ಭಾವಸಾರ ವಧು-ವರರ ಕೇಂದ್ರ ಹಾಗೂ ಭಾವಸಾರ ವಿಜನ್ ಇಂಡಿಯ ವತಿಯಿಂದ ಇಂದು ಬೆಳಿಗ್ಗೆ 9ರಿಂದ ಮಧ್ಯಾಹ್ನ 3ರವರೆಗೆ ರಾಜ್ಯಮಟ್ಟದ ವಧು-ವರ 7ನೇ ಸಮ್ಮೇಳನ ಹಮ್ಮಿಕೊಳ್ಳಲಾಗಿದೆ ಎಂದು ಕೇಂದ್ರದ ಗೌರವ ಅಧ್ಯಕ್ಷ ವಾಗೀಶ್.ಪಿ. ಗುಜ್ಜರ್ ತಿಳಿಸಿದ್ದಾರೆ.

ದಾವಣಗೆರೆ ಮಹಾರಾಜ ಪೇಟೆಯಲ್ಲಿನ ಶ್ರೀವಿಠಲ ಮಂದಿರದ ಶ್ರೀ ವಿಠಲ ರುಕುಮಾಯಿ ಸಮುದಾಯ ಭವನದಲ್ಲಿ ನಡೆಯಲಿರುವ ಸಮ್ಮೇಳನದ ಅಧ್ಯಕ್ಷತೆಯನ್ನು ಭಾವಸಾರ ಕ್ಷತ್ರಿಯ ಸಮಾಜದ ಅಧ್ಯಕ್ಷ ರಘು ಮುಸಳೆ ವಹಿಸಲಿದ್ದು, ಅಂತರ್ ರಾಷ್ಟ್ರೀಯ ಭಾವಸಾರ ಕ್ಷತ್ರಿಯ ಮಹಾಸಭಾದ ಅಧ್ಯಕ್ಷ ಜಯಪ್ರಕಾಶ್.ಯು. ಅಂಬರ್‌ಕರ್ ಉದ್ಘಾಟಿಸುವರು.

ಮುಖ್ಯ ಅತಿಥಿಗಳಾಗಿ ಭಾವಸಾರ ಕ್ಷತ್ರಿಯ ದೈವ ಮಂಡಳಿಯ ಗೌರವಾಧ್ಯಕ್ಷ ಡಾ.ಎಂ.ಆರ್. ಜಯಪ್ರಕಾಶ್, ಮಾಜಿ ಅಧ್ಯಕ್ಷ ರಾಘವೇಂದ್ರ ರಾವ್ ಗುಜ್ಜರ್, ವಧು-ವರ ಕೇಂದ್ರದ ಅಧ್ಯಕ್ಷ ಸತ್ಯನಾರಾಯಣ, ಉಪಾಧ್ಯಕ್ಷ ಅಶೋಕ ವಿ. ಅಂಬರ್‌ಕರ್ ಉಪಸ್ಥಿತರಿರುವರು.

ಸಮೇಳನದಲ್ಲಿ ವಧು-ವರ ಮಾಹಿತಿ ಒದಗಿಸುವ ಮೈಸೂರಿನ ರಮೇಶ್ ನಾಜರೆ, ಬೆಂಗಳೂರಿನ ಲಲಿತ ನಾಜರೆ, ಶೈಲೇಶ್ ನಾಜರೆ, ಸತೀಶ್ ತೇಲ್ಕರ್, ಲಕ್ಷ್ಮಣರಾವ್ ಅಂಬರ್‌ಕರ್, ಕಾರ್ಯದರ್ಶಿ ಬಾಲಕೃಷ್ಣ ನವಲೆ ಪಾಲ್ಗೊಳ್ಳಲಿದ್ದಾರೆ ಎಂದು ಪ್ರಧಾನ ಕಾರ್ಯದರ್ಶಿ ನಿಂಗೋಜಿ ರಾವ್ ಗುಜ್ಜರ್ ತಿಳಿಸಿದ್ದಾರೆ.

ವಿವರಕ್ಕೆ ಅಧ್ಯಕ್ಷರಾದ ಸತ್ಯನಾರಾಯಣ ಸಾಕ್ರೆ (9886686567), ಕಾರ್ಯದರ್ಶಿ ಬಾಲಕೃಷ್ಣ ನವಲೆ (9008526948) ಅವರನ್ನು ಸಂಪರ್ಕಿಸುವಂತೆ ಸಹ ಕಾರ್ಯದರ್ಶಿ ಹರೀಶ್ ಖಾಂಡ್ಕೆ ವಿನಂತಿಸಿದ್ದಾರೆ.

## ಕೊಕ್ಕನೂರಿನಲ್ಲಿ ಇಂದು

ಗ್ರಾಮ ಒನ್ ಕೇಂದ್ರದಲ್ಲಿ ಇಂದು ಬೆಳಿಗ್ಗೆ 9.30 ಕ್ಕೆ ನಿವೃತ್ತ ಸೈನಿಕರಿಗೆ ಗೌರವ ಸನ್ಮಾನ ಕಾರ್ಯಕ್ರಮ ನಡೆಯಲಿದೆ.


**ವಿಶ್ವಕರ್ಮ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ.,**
**ನಂ. 751, ತುಳಸಿ ಕಾಂಪ್ಲೆಕ್ಸ್, 1ನೇ ಮಹಡಿ, ವಸಂತ ರಸ್ತೆ, ದಾವಣಗೆರೆ.**
ರಿ.ನಂ.ಎ.ಆರ್. 31, ಆರ್.ಜಿ.ಎನ್. 23240 / 97-98 ತಾ. 1.7.1997

**ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ**

ಮಾನ್ಯ ಸದಸ್ಯರಲ್ಲಿ ಈ ಮೂಲಕ ವಿನಂತಿಸಿಕೊಳ್ಳುವುದೇನೆಂದರೆ ನಮ್ಮ ಸೊಸೈಟಿಯು 25ನೇ ವರ್ಷದ ಬೆಳ್ಳಿ ಮಹೋತ್ಸವ ಆಚರಣೆ ಮಾಡುತ್ತಿದ್ದು, ವಾರ್ಷಿಕ ಮಹಾಸಭೆಯಲ್ಲಿ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಕಾರಣ ಎಸ್.ಎಸ್.ಎಲ್.ಸಿ. ಹಾಗೂ ಪಿ.ಯು.ಸಿ.ಯಲ್ಲಿ ಶೇ. 90ಕ್ಕಿಂತ ಹೆಚ್ಚು ಅಂಕ ಪಡೆದು ತೇರ್ಗಡೆಯಾದ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲು ಆಡಳಿತ ಮಂಡಳಿ ತೀರ್ಮಾನಿಸಿದೆ.

ಆದ್ದರಿಂದ ದಿನಾಂಕ 30.08.2022ರೊಳಗೆ (ಸದಸ್ಯರ ಮಕ್ಕಳ) ವಿದ್ಯಾರ್ಥಿಗಳ ಅಂಕಪಟ್ಟಿ, ಆಧಾರ್ ಕಾರ್ಡ್, 2 ಪಾಸ್‌ಪೋರ್ಟ್ ಸೈಜ್ ಫೋಟೋ ಮತ್ತು ಪೋಷಕರ ಸದಸ್ಯತ್ವದ ಗುರುತಿನ ಚೀಟಿಯನ್ನು ಮುಖ್ಯ ಕಛೇರಿಗೆ ಸಲ್ಲಿಸಲು ಸೂಚಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೊ.ನಂ. 95908 07050, 08192 271472ಗೆ ಸಂಪರ್ಕಿಸಿ.

ಸಹಿ/- ಕಾರ್ಯದರ್ಶಿ, ವಿಶ್ವಕರ್ಮ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ., ದಾವಣಗೆರೆ.


# ಉತ್ತಮ 'ಬೆಲೆ' ನಿರೀಕ್ಷೆಯಲ್ಲಿ ತಾಲ್ಲೂಕಿನ ರೈತರು

**(1ನೇ ಪುಟದಿಂದ)** ಖರೀದಿ ನಡೆಯಿತು ಎಂದು 'ಜನತಾವಾಣಿ'ಯೊಂದಿಗೆ ಮಾತನಾಡಿದ ಮಾರುಕಟ್ಟೆ ಖ್ಯಾತ ವರ್ತಕ, ಕುಸುಮ ಏಜೆನ್ಸಿ ಮಾಲೀಕ ತಿಮ್ಮರಾಜು, ಮತ್ತು ಎಸ್.ಆರ್. ಟ್ರೇಡರ್ಸ್ ಮಾಲೀಕ ಜಿ.ಸಿ. ಬಾಲರಾಜು ಹೇಳಿದರು.

ಈ ವರ್ಷ ಹತ್ತಿ ಅತಿ ಹೆಚ್ಚಿನ ಪ್ರಮಾಣದಲ್ಲಿ ಮಾರು ಕಟ್ಟೆಗೆ ಬರಲಿದೆ. ಮುಂದಿನ ಒಂದೆರಡು ವಾರಗಳಲ್ಲಿ ಸಾವಿರಾರು ಕಿಂಟಾಲ್ ಹತ್ತಿ ಮಾರುಕಟ್ಟೆಗೆ ಬರುವ ನಿರೀಕ್ಷೆ ಇದೆ. ರೈತರಿಗೆ ಉತ್ತಮ ಧಾರಣೆಯೂ ಸಿಗಲಿದೆ ಎಂಬ ಅಭಿಪ್ರಾಯವನ್ನು ಅವರು ವ್ಯಕ್ತಪಡಿಸಿ, ರೈತರ ಮುಖದಲ್ಲಿ ಮಂದಹಾಸ ಮೂಡಿಸಿದ್ದಾರೆ.

## ನಗರದಲ್ಲಿ ಇಂದು ರೋಲರ್ ಸ್ಕೇಟಿಂಗ್ ರ್‍ಯಾಲಿ

ನ್ಯೂ ದಾವಣಗೆರೆ ಡಿಸ್ಟ್ರಿಕ್ಟ್ ರೋಲರ್ ಸ್ಕೇಟಿಂಗ್ ಅಸೋಸಿಯೇಷನ್ ಮತ್ತು ರೋಟರಿ ಕ್ಲಬ್, ದಾವಣಗೆರೆ ದಕ್ಷಿಣ ಇವರ ಸಹಯೋಗದೊಂದಿಗೆ ಇಂದು ಬೆಳಿಗ್ಗೆ 8 ಗಂಟೆಗೆ ಗುಂಡಿ ಮಹಾದೇವಪ್ಪ ವೃತ್ತದಿಂದ ಜಯದೇವ ವೃತ್ತದವರೆಗೆ 75 ಸ್ಕೇಟರ್‌ಗಳಿಂದ ರೋಲರ್ ಸ್ಕೇಟಿಂಗ್ ರ್‍ಯಾಲಿ ನಡೆಯಲಿದೆ.

ಕಾರ್ಯಕ್ರಮದ ಉದ್ಘಾಟನೆಯನ್ನು ಶಿವಾನಂದ ಕಪಾಸಿ ನೆರವೇರಿಸಲಿದ್ದು, ಮುಖ್ಯ ಅತಿಥಿಗಳಾಗಿ ಶ್ರೀಮತಿ ಎನ್. ದುರ್ಗಾಶ್ರೀ, ಗಡಿಗುಡಾಳ್ ಮಂಜುನಾಥ್ ಆಗಮಿಸುವರು. ರೋಟರಿ ಕ್ಲಬ್ ದಾವಣಗೆರೆ ದಕ್ಷಿಣ ವಲಯದ ಅಧ್ಯಕ್ಷ ಸಿ.ಕೆ. ರಂಗಪ್ಪ ಅಧ್ಯಕ್ಷತೆ ವಹಿಸುವರು.

## ನಗರಕ್ಕೆ ಇಂದು ಜಿಲ್ಲಾ ಉಸ್ತುವಾರಿ ಸಚಿವರು

ನಗರಾಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ ಬಸವರಾಜ್ (ಭೈರತಿ) ಅವರು ಇಂದು ನಗರಕ್ಕೆ ಆಗಮಿಸಿ, ಪ್ರವಾಸಿ ಮಂದಿರದಲ್ಲಿ ವಾಸ್ತವ್ಯ ಮಾಡುವರು.

ನಾಳೆ ಸೋಮವಾರ ಬೆಳಿಗ್ಗೆ 8.30 ಕ್ಕೆ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿರುವ ಸಂಗೊಳ್ಳಿ ರಾಯಣ್ಣ ಪುತ್ಥಳಿಗೆ ಮಾಲಾರ್ಪಣೆ ಮಾಡುವರು. ನಂತರ ಬೆಳಿಗ್ಗೆ 9 ಗಂಟೆಗೆ ಜಿಲ್ಲಾ ಕ್ರೀಡಾಂಗಣದಲ್ಲಿ ಜರುಗುವ 75 ನೇ ಸ್ವಾತಂತ್ರ್ಯೋತ್ಸವದ ರಾಷ್ಟ್ರ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಭಾಗವಹಿಸುವರು. ಅಲ್ಲಿಂದ ಹಾವೇರಿಗೆ ತೆರಳುವರು.


**ಸರ್ವರಿಗೂ ಸ್ವಾತಂತ್ರ್ಯದ ಅಮೃತ ಮಹೋತ್ಸವ ಶುಭಾಶಯಗಳು**

**ದಾವಣಗೆರೆ ಹಾರ್ಟ್ ಹಾಸ್ಪಿಟಲ್**
ನಂ. 3639, 9ನೇ ಮೇನ್, 5ನೇ ಕ್ರಾಸ್, ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ - 577 004.



**ಹೃದಯ ತೊಂದರೆಗೆ ಉಚಿತ ಸಲಹೆ**

15 ಆಗಸ್ಟ್ 2022 ರಿಂದ 15 ಆಗಸ್ಟ್ 2023 ರ ವರೆಗೆ (1 ವರ್ಷ)

ಡಾ|| ಕೆ.ಎಸ್. ಸೋಮಶೇಖರ್ ಎಂ.ಡಿ., ಡಿ.ಎಂ.
ಹಿರಿಯ ಸಮಾಲೋಚಕರು

ಡಾ|| ಸಾಯಿ ಸೂರಜ್ ಎಂ.ಎಸ್., ಎಂಸಿಹೆಚ್.,
ಹೃದಯರೋಗ ಶಸ್ತ್ರಚಿಕಿತ್ಸಾ ತಜ್ಞರು
ಫೋರ್ಟಿಸ್ ಹಾಸ್ಪಿಟಲ್, ಬೆಂಗಳೂರು

ಮಾಹಿತಿಗಾಗಿ ಸಂಪರ್ಕಿಸಿ :
93538 99577, 63609 67090, 63609 79965.



**GODOWN AVAILABLE FOR RENT**



3600 sqft. With 18 HP Power available
Shankar Vihar Extension, P.B. Road, Davangere.
Contact:
98869 78843
98440 63379



**ಉಚಿತ**
**ಮದ್ಯಪಾನ ವ್ಯಸನ ಬಿಡಿಸುವ ಶಿಬಿರ**

75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವ ಆಚರಣೆಯ ಸವಿನೆನಪಿಗಾಗಿ
7 ದಿನಗಳ 2 ವಸತಿಯುತ ಶಿಬಿರಗಳು

1ನೇ ಶಿಬಿರ :
ದಿನಾಂಕ : 15.08.2022 ರಿಂದ 22.08.2022ರವರೆಗೆ
2ನೇ ಶಿಬಿರ :
ದಿನಾಂಕ : 23.08.2022 ರಿಂದ 31.08.2022ರವರೆಗೆ
ನಡೆಸಲಾಗುವುದು.

ಈ ಶಿಬಿರಗಳಲ್ಲಿ ವ್ಯಸನಿಗಳಿಗೆ
1. ವೈದ್ಯಕೀಯ ಚಿಕಿತ್ಸೆ 2. ಮಾನಸಿಕ ಚಿಕಿತ್ಸೆ
3. ಯೋಗ ಮತ್ತು ಧ್ಯಾನ 4. ವೈಯಕ್ತಿಕ ಆಪ್ತ ಸಮಾಲೋಚನೆ
5. ಕುಟುಂಬ ಆಪ್ತ ಸಮಾಲೋಚನೆ
6. ಗುಂಪು ಚರ್ಚೆ ಇತ್ಯಾದಿ ಮಾಡಲಾಗುವುದು.

* ಮೊದಲು ಬಂದ 15 ಜನ ವ್ಯಸನಿಗಳಿಗೆ ಮಾತ್ರ ಅವಕಾಶ ಇರುತ್ತದೆ.
* ಕಡ್ಡಾಯವಾಗಿ ಆಧಾರ್ ಕಾರ್ಡ್ ತರತಕ್ಕದ್ದು.
* ಷರತ್ತುಗಳು ಅನ್ವಯ

ಸಂಪರ್ಕಿಸಿ :
**ಪರಿವರ್ತನ**
**ಮದ್ಯಪಾನ ವ್ಯಸನ ಮುಕ್ತಿ ಕೇಂದ್ರ**
ಎ.ಎಂ. ಅಪಾರ್ಟ್‌ಮೆಂಟ್ ಎದುರು,
ಕೊನೆ ಬಸ್ ನಿಲ್ದಾಣದ ಹತ್ತಿರ, ಮುಖ್ಯರಸ್ತೆ, ವಿದ್ಯಾನಗರ, ದಾವಣಗೆರೆ.
99806 66220, 86185 02057



**ಸ್ವಾತಂತ್ರ್ಯ ಅಮೃತ ಮಹೋತ್ಸವದ ಶುಭಾಶಯಗಳು**

**TATA POWER SOLAR SYSTEMS LTD.,**

**GOODBYE TO HIGH ELECTRICITY BILLS.**
**INVEST IN SOLAR**



**WHY USE SOLAR POWER?**

GUARANTEED LIFETIME SAVINGS
UPTO 50% OR MORE REDUCTION IN ELECTRICITY BILLS

PAYS FOR ITSELF
4-7 YEARS AVG. PAYBACK PERIOD FOR RECOVERING INITIAL INVESTMENT

BECOME A GREEN HERO
1 KWP SYSTEM ABATES EMISSIONS EQUIVALENT TO PLANTING OF 50 TREES

FREEDOM FROM RISING ELECTRICITY TARIFFS
AVG. GRID TARIFF INCREASE OF 3-5% PER YEAR

Mob : 99001 42052 Mob : 80730 26396

Authorised Channel Partner
**M/S BASAVASHREE SOLAR TECHNOLOGIES**
Dealers in : Solar Panels,Batteries & Electricals D No. : 43H, SJJM Complex, Jayadeva Circle, Channagiri Road, Davangere - 577 002.

# ಜೀವ ಸಂಜೀವನ ನ್ಯಾಚುರಲ್ ಲೈಫ್

## (ಜೀವ ವೈವಿಧ್ಯತೆಯ ಪ್ರಕೃತಿ ಚಿಕಿತ್ಸಾ ಕೇಂದ್ರ)

**ಚಾಮರಹಳ್ಳಿ, ಕೋಲಾರ ತಾಲ್ಲೂಕು ಮತ್ತು ಜಿಲ್ಲೆ**

**ಫೋನ್ : 94495 52230, 63615 94930**




**ಕ್ರಮಬದ್ಧ ಆಹಾರ, ವಾಯು, ನೀರು, ಬಿಸಿಲು, ಬೆಳಕು, ನಿದ್ದೆ, ಯೋಗ, ಧ್ಯಾನ, ಕಾಲ್ನಡಿಗೆ, ಲಘು ಉಪವಾಸದ ಮೂಲಕ ಆರೋಗ್ಯಯುತ ಬದುಕಿಗೆ ಹೊಸ ಹಾದಿ ತೋರುವ "ಜೀವ ಸಂಜೀವನ" ಕಾರ್ಯಕ್ರಮಕ್ಕೆ ನೋಂದಾಯಿಸಿ. ಆರೋಗ್ಯಯುತ ಬದುಕಿಗೆ ಹೊಸ ಚೇತನ ಪಡೆಯಿರಿ...**

☛ ಡಯಾಬಿಟೀಸ್, ಅಧಿಕ ರಕ್ತದೊತ್ತಡ, ಹೃದಯದ ತಡೆ, ಮೆದುಳಿನ ತಡೆ, ಅಧಿಕ ಕೊಲೆಸ್ಟ್ರಾಲ್ ಇವುಗಳ ನಿರ್ವಹಣೆ, ನಿವಾರಣೆ ಬಹಳ ಸುಲಭ.ಆದರೆ ಕಾರಣಗಳು ಹಾಗೂ ಆಹಾರ ಜೀವನ ಶೈಲಿಯ ಪರಿಹಾರಗಳ ಕುರಿತು ಜನಸಾಮಾನ್ಯರಲ್ಲಿ ಅರಿವಿನ ಕೊರತೆಯ ಕಾರಣ ಇವು ಪರಿಹರಿಸಲಾಗದ ಕಗ್ಗಂಟಾಗಿದ್ದು, ಜೀವ ಸಂಜೀವನದಲ್ಲಿ ಆಹಾರ ಚಿಕಿತ್ಸೆಯ ಮೂಲಕ ಸುಲಭ ಪರಿಹಾರಗಳನ್ನು ಪಡೆಯಬಹುದು.

☛ ಅಜೀರ್ಣ, ಮಲಬದ್ದತೆ, ಗ್ಯಾಸ್ಟ್ರಿಕ್, ಅಸಿಡಿಟಿ, ಅಲ್ಸರ್, ಜೀರ್ಣಾಂಗ ಸಮಸ್ಯೆಗಳು, ತಲೆನೋವು, ಅರೆತಲೆನೋವು, ಕಾಲು ನೋವು, ಕೀಲುನೋವು, ಮಂಡಿನೋವು, ಬೆನ್ನು ನೋವು, ರಕ್ತ ಹೀನತೆ, ಅಪೌಷ್ಠಿಕತೆ ಮುಂತಾದ ಸಮಸ್ಯೆಗಳಿಗೆ ಆಹಾರ ಚಿಕಿತ್ಸಾ ಪರಿಹಾರಗಳು.

☛ ಅಧಿಕ ದೇಹಸ್ಥೂಲತೆ, ಕಡಿಮೆ ದೇಹಸ್ಥೂಲತೆ, ಕಡಿಮೆ ರಕ್ತದೊತ್ತಡ, ಕೆಮ್ಮು, ನೆಗಡಿ, ಸೀನು, ಗಂಟಲು ನೋವು, ಪದೇ ಪದೇ ಕಾಡುವ ಜ್ವರಗಳು, ಸೋಂಕು ರೋಗಗಳು, ಕುಂಠಿತ ರೋಗ ನಿರೋಧಕ ಶಕ್ತಿ, ಉಬ್ಬಸ, ಉಸಿರಾಟದ ಸಮಸ್ಯೆಗಳು ಮುಂತಾದವುಗಳಿಗೆ ಔಷಧ ರಹಿತ ಆಹಾರ ಚಿಕಿತ್ಸೆ.

☛ ಚರ್ಮ ವ್ಯಾಧಿಗಳು, ನಿದ್ರಾಹೀನತೆ, ಪಿತ್ತಜನಕಾಂಗದ ಸಮಸ್ಯೆಗಳು, ಮೂತ್ರ ಜನಕಾಂಗದ ಸಮಸ್ಯೆಗಳು ಮುಂತಾದ ಹತ್ತು ಹಲವಾರು ಸಮಸ್ಯೆಗಳಿಗೆ ಸುಲಭ ಮಾರ್ಗೋಪಾಯಗಳು.

☛ ಡಯಾಬಿಟೀಸ್, ಅಧಿಕ ಬಿಪಿ, ಹೃದಯದ ತಡೆ, ಹೃದಯಾಘಾತ,ಲಕ್ವಾ ,ಕ್ಯಾನ್ಸರ್, ಮೂತ್ರಜನಕಾಂಗದ ವೈಫಲ್ಯತೆ ಮುಂತಾದ ಕಾಯಿಲೆಗಳು ಬಾರದಂತೆ ತಡೆಯುವ ಜೀವನ ಕ್ರಮಗಳು.

☛ ಆಹಾರ - ಜೀವನ ಶೈಲಿ - ಪ್ರಕೃತಿ ಚಿಕಿತ್ಸೆಯ ಮೂಲಕ ಕಾಯಿಲೆಗಳು ಬಾರದಂತೆ ತಡೆಯುವ, ಬಂದಿದ್ದಲ್ಲಿ ನಿರ್ವಹಣೆ/ನಿವಾರಣೆಯ ಬದುಕಿನ ಬಹು ಮುಖ್ಯ ಜೀವನ ವಿಧಾನದ ಅರಿವು ಮೂಡಿಸುವ" ಜೀವ ಸಂಜೀವನ "ಕಾರ್ಯಕ್ರಮದಲ್ಲಿ ಭಾಗವಹಿಸಿ.

*ಆರೋಗ್ಯದ ಬದುಕಿಗೆ ನಾಂದಿ ಹಾಡಿ.*
*ಆರೋಗ್ಯವೇ ಭಾಗ್ಯ, ಅದು ಆಹಾರದಿಂದ ಬಹುಸುಲಭ ಸಾಧ್ಯ ....*



**ಆರ್. ರಾಜಶೇಖರ್,** ಆಹಾರ ತಜ್ಞರು ಮತ್ತು ಸಂಸ್ಥಾಪಕರು, ಜೀವ ಸಂಜೀವನ ನ್ಯಾಚುರಲ್ ಲೈಫ್
(ಜೀವ ವೈವಿಧ್ಯತೆಯ ಪ್ರಕೃತಿ ಚಿಕಿತ್ಸಾ ಕೇಂದ್ರ)
ಚಾಮರಹಳ್ಳಿ, ಕೋಲಾರ ತಾಲ್ಲೂಕು ಮತ್ತು ಜಿಲ್ಲೆ, ಫೋನ್ : 94495 52230, 63615 94930

**ಪ್ರಕಟಣೆ ಸೇವೆ : ಬಿ. ನಾಗೇಶ್, ಶ್ರೀ ಚನ್ನೇಶ್ವರ ರೈಸ್ ಇಂಡಸ್ಟ್ರೀಸ್, ಮಲೇಬೆನ್ನೂರು.**

# ಸರ್ವರಿಗೂ 75ನೇ ಸ್ವಾತಂತ್ರ್ಯೋತ್ಸವದ ಶುಭಾಶಯಗಳು

## ಗ್ರಾಹಕರ ಸೇವೆಯನ್ನೇ ಮುಖ್ಯ ಗುರಿಯನ್ನಾಗಿಸಿಕೊಂಡಿರುವ



# ನಿಮ್ಮ 'ರವಿತೇಜ' ದಲ್ಲಿ



10% OFF + 10% OFF

ಎಲ್ಲಾ ಬಟ್ಟೆಗಳ ಮೇಲೆ...

50% OFF

ಆಯ್ದ ಬಟ್ಟೆಗಳ ಮೇಲೆ ...

ಕೇವಲ ಎರಡು ದಿನಗಳು ಮಾತ್ರ

ಇಂದೇ ಭೇಟಿ ಕೊಡಿ...

# Raviteja

## Textiles

**Silk Sarees | Mens Wear | Kids Wear**

**ರವಿತೇಜ ಗಾರ್ಮೆಂಟ್ಸ್**
ಚಾಮರಾಜಪೇಟೆ ಫೋ : 98800 32999

**ರವಿತೇಜ'ಸ್**
ವಿದ್ಯಾನಗರ ಫೋ : 98803 82611

**ರವಿತೇಜ ಫ್ಯಾಷನ್**
ಚೇತನ ಹೋಟೆಲ್ ರಸ್ತೆ ಫೋ : Ph. : 95916 33871

**ರವಿತೇಜ ಸಿಲ್ಕ್ಸ್ ಅಂಡ್ ಸ್ಯಾರೀಸ್**
ವಿಜಯಲಕ್ಷ್ಮಿ ರಸ್ತೆ ಫೋ : 98444 66844, 97419 53993

# ದಿ ವೆಜಿಟಬಲ್ ಪ್ಲಾಂಟ್ ಸೌಹಾರ್ದ ಕೋ - ಆಪರೇಟಿವ್ ಲಿ.,

# ಎನ್.ಎಫ್-01, 02, ಶ್ರೀ ಮುರುಘರಾಜೇಂದ್ರ ಕಾಂಪ್ಲೆಕ್ಸ್,
1ನೇ ಮಹಡಿ, ನಿಟುವಳ್ಳಿ ರಸ್ತೆ, ದಾವಣಗೆರೆ-577 002. ಫೋ. : 08192 232377.

# 6ನೇ ವರ್ಷದ ಸರ್ವಸದಸ್ಯರ ವಾರ್ಷಿಕ ಮಹಾಸಭೆ

ದಿ. ವೆಜಿಟಬಲ್ ಪ್ಲಾಂಟ್ ಸೌಹಾರ್ದ ಕೋ ಆಪರೇಟಿವ್ ಲಿ. ದಾವಣಗೆರೆ ಇದರ 2021-2022ನೇ 6ನೇ ವಾರ್ಷಿಕ ಮಹಾಸಭೆಯನ್ನು ದಿನಾಂಕ : 14.08.2022ನೇ ಭಾನುವಾರದಂದು ಬೆಳಿಗ್ಗೆ 11.00 ಗಂಟೆಗೆ ದಾವಣಗೆರೆ ಕಲಾ ಪ್ರಕಾಶ ವೃಂದ (ರಿ.) ದಾವಣಗೆರೆ-ಹರಿಹರ ಅರ್ಬನ್ ಸಹಕಾರ ಸಮುದಾಯ ಭವನ ಎಂಸಿಸಿ ಎ ಬ್ಲಾಕ್ (ರಾಮಕೃಷ್ಣ ಆಶ್ರಮದ ಎದುರು) ದಾವಣಗೆರೆ ಇಲ್ಲಿ ಕರೆಯಲಾಗಿದೆ. ಮಾನ್ಯ ಸದಸ್ಯರು ಸಕಾಲಕ್ಕೆ ಆಗಮಿಸಿ ಸಭೆಯನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿಸಿಕೊಳ್ಳುತ್ತೇವೆ.

## ನಿರ್ದೇಶಕರ ಮಂಡಳಿ



ಬಿ. ಸುರೇಶ್ ಹಾಲೇಕಲ್ಲು – ಅಧ್ಯಕ್ಷರು
ಜೆ.ಕೆ. ಶಿವಕುಮಾರ್ – ಉಪಾಧ್ಯಕ್ಷರು
ಕೆ.ಹೆಚ್. ಶಿವಯೋಗಪ್ಪ – ನಿರ್ದೇಶಕರು
ಆರ್.ಎನ್. ಮಾರುತಿ – ನಿರ್ದೇಶಕರು
ಎನ್. ರಾಜಣ್ಣ – ನಿರ್ದೇಶಕರು
ಹೆಚ್.ಬಿ. ಮಂಜುನಾಥ್ – ನಿರ್ದೇಶಕರು
ಎಸ್.ವಿ. ರುದ್ರಮುನಿ – ನಿರ್ದೇಶಕರು
ಟಿ. ಮಹಾಂತೇಶ್ – ನಿರ್ದೇಶಕರು
ಎಂ.ಹೆಚ್.ರಾಜಪ್ಪ – ನಿರ್ದೇಶಕರು
ಮಲ್ಲಿಕಾರ್ಜುನ್ ಪಿ. ವಾಲಿ – ನಿರ್ದೇಶಕರು
ಶ್ರೀಮತಿ ಆಶಾ ಕೃಷ್ಣಮೂರ್ತಿ – ನಿರ್ದೇಶಕರು
ಶ್ರೀಮತಿ ಹೆಚ್.ಟಿ. ಶ್ವೇತಾ – ನಿರ್ದೇಶಕರು
ಆರ್. ವೆಂಕಟಾಚಲಮೂರ್ತಿ – ಮುಖ್ಯ ಕಾರ್ಯನಿರ್ವಾಹಕರು

### ದಿನಾಂಕ : 31.03.2022 ಕ್ಕೆ ಇದ್ದಂತೆ ಆಸ್ತಿ-ಜವಾಬ್ದಾರಿ ತಃಖ್ತೆ

| ಕ್ರ.ಸಂ. | ಜವಾಬ್ದಾರಿಗಳ ವಿವರ | ಮೊಬಲಗು | ಮೊಬಲಗು |
|---|---|---|---|
| 01) | **ಷೇರು ಬಂಡವಾಳ :** | | |
| | ಸದಸ್ಯರಿಂದ | 16,96,000-00 | 18,31,800-00 |
| | ಸಹ ಸದಸ್ಯರಿಂದ | 1,35,800-00 | |
| 02) | **ನಿಧಿಗಳು :** | | 63,48,012-15 |
| | ಆಪದ್ಧನ ನಿಧಿ | 18,77,487-15 | |
| | ಕಟ್ಟಡ ನಿಧಿ | 17,21,824-00 | |
| | ಕರಡು ಸಾಲದ ನಿಧಿ | 13,49,156-00 | |
| | ಸಿಬ್ಬಂದಿ ಕ್ಷೇಮಾಭಿವೃದ್ಧಿ ನಿಧಿ | 6,66,651-00 | |
| | ಸಾಮಾಜಿಕ ಕ್ಷೇಮಾಭಿವೃದ್ಧಿ ನಿಧಿ | 6,82,507-00 | |
| 03) | **ಠೇವಣಿಗಳು :** | | 7,01,00,528-00 |
| | ಸದಸ್ಯರ ಉಳಿತಾಯ ಖಾತೆ | 52,96,408-00 | |
| | ಚಾಲ್ತಿ ಖಾತೆ | 1,71,468-00 | |
| | ಎಮ್.ಎಫ್.ಎಲ್. ಭದ್ರತಾ ಠೇವಣಿ | 2,13,637-00 | |
| | ಕಲ್ಪ ವೃಕ್ಷ ಭದ್ರತಾ ಠೇವಣಿ | 5,03,947-00 | |
| | ಶ್ರೀ ಜಯದೇವ ನಿಧಿ ಕ್ಯಾಷ್ ಸರ್ಟಿಫಿಕೇಟ್ | 2,42,82,066-00 | |
| | ಖಾಯಂ ಠೇವಣಿ | 2,28,70,015-00 | |
| | ಪಿಗ್ಮಿ ಠೇವಣಿ | 1,46,82,630-00 | |
| | ಕಲ್ಪ ವೃಕ್ಷ ಅಮಾನತ್ತು ಠೇವಣಿ | 18,810-00 | |
| | ಸಿಬ್ಬಂದಿ ಭದ್ರತಾ ಠೇವಣಿ | 81,870-00 | |
| | ಸಂಚಿತ ಠೇವಣಿ | 19,79,677-00 | |
| | ಇತರೆ ಜವಾಬ್ದಾರಿಗಳು | | |
| | ಸಿಬ್ಬಂದಿ ಗ್ರಾಚ್ಯುಟಿ | 75,000-00 | 13,77,846-00 |
| | ಅಮಾನತ್ತು ಖಾತೆ | 7,947-00 | |
| | ಸಹ ಸದಸ್ಯತ್ವ ಲಾಭಾಂಶ | 19,392-00 | |
| | ಸದಸತ್ವ ಲಾಭಾಂಶ | 2,97,920-00 | |
| | ಷೇರು ಅಮಾನತ್ತು | 37,430-00 | |
| | ಲೆಕ್ಕ ಪರೀಶೋಧನಾ ಶುಲ್ಕ | 30,000-00 | |
| | ಸಿಜಿಎಸ್ಟಿ ಖಾತೆ | 9,311-00 | |
| | ಚುನಾವಣಾ ಠೇವಣಿ | 21,000-00 | |
| | ಕೊಡತಕ್ಕ ಬಡ್ಡಿ | 6,70,035-00 | |
| | ದೇವೇಂದ್ರಪ್ಪ ಅಮಾನತ್ತು | 500-00 | |
| | Prov. on Comp H/W and S/W | 2,00,000-00 | |
| | ಎಸ್.ಜಿ.ಎಸ್.ಟಿ. ಖಾತೆ | 9,311-00 | |
| | ನಿವ್ವಳ ಲಾಭ | | 22,53,255-30 |
| | ಒಟ್ಟು | | 8,19,11,441-45 |

| ಕ್ರ.ಸಂ. | ಆಸ್ತಿಗಳ ವಿವರ | ಮೊಬಲಗು | ಮೊಬಲಗು |
|---|---|---|---|
| 01) | ಕೈಯಲ್ಲಿ ನಗದು ಶಿಲ್ಕು | | 1,63,689-00 |
| | **ಬ್ಯಾಂಕ್ ಖಾತೆಗಳು :** | | 85,39,761-95 |
| 02) | ಡಿ.ಹೆಚ್.ಯು.ಎಸ್. ಬ್ಯಾಂಕ್ ಚಾಲ್ತಿ ಖಾತೆ | 46,88,411-80 | |
| | ದಾ.ಜಿ.ಕೇ.ಸ. ಬ್ಯಾಂಕ್ ಚಾಲ್ತಿ ಖಾತೆ | 2,852-25 | |
| | ಏಕ್ಸಿಸ್ ಬ್ಯಾಂಕ್ ಚಾಲ್ತಿ ಖಾತೆ | 1,66,864-30 | |
| | ಆರ್.ಬಿ.ಎಲ್. ಬ್ಯಾಂಕ್ ಚಾಲ್ತಿ ಖಾತೆ | 16,64,103-60 | |
| | ಶ್ರೀ ಬೀ.ಕೈ.ಸ.ಸಂಘ ಉಳಿತಾಯ ಖಾತೆ | 20,17,530-00 | |
| | **ವಿನಿಯೋಗಗಳು :** | | 1,60,76,219-00 |
| 03) | ಡಿ.ಹೆಚ್.ಯು,ಎಸ್. ಬ್ಯಾಂಕ್ ಖಾಯಂ ಠೇವಣಿ | 53,26,985-00 | |
| | ದಾ.ಜಿ.ಸೌ. ಒಕ್ಕೂಟ ಷೇರು ಖಾತೆ | 50,000-00 | |
| | ಶ್ರೀ ಬೀ.ಕೈ.ಸ.ಸಂಘ ಖಾಯಂ ಠೇವಣಿ | 1,06,99,234-00 | |
| | **ಸದಸ್ಯರ ಸಾಲದ ಖಾತೆಗಳು :** | | 5,53,93,550-00 |
| | ಕಟ್ಟಡ ಸಾಲ | 22,90,385-00 | |
| 04) | ವಾಹನ ಸಾಲ | 1,19,05,803-00 | |
| | ಕಂತಿನ ಸಾಲ | 1,75,74,227-00 | |
| | ಸೆ.ಕ್ಯಾ.ಕ್ರೆ.ಸಾಲ | 57,36,262-00 | |
| | ಅಡವು ಸಾಲ | 89,36,572-00 | |
| | ಮೈಕ್ರೊ ಫೈನಾನ್ಸ್ ಸಾಲ | 70,91,650-00 | |
| | ಪಿಗ್ಮಿ ಆಧಾರಿತ ಸಾಲ | 7,74,049-00 | |
| | ಕ್ಯಾ.ಕ್ರೆ. ಆಧಾರಿತ ಸಾಲ | 5,00,751-00 | |
| | ಖಾಯಂ ಠೇವಣಿ ಆಧಾರಿತ ಸಾಲ | 5,48,851-00 | |
| | ಸಂಚಿತ ಠೇವಣಿ ಆಧಾರಿತ ಸಾಲ | 35,000-00 | |
| | | | 3,54,211-00 |
| | ಚರಾಸ್ತಿಗಳು | | |
| | ಪಿಠೋಪಕರಣಗಳು | 2,91,385-00 | |
| | ಕಂಪ್ಯೂಟರ್ ಹಾರ್ಡ್‌ವೇರ್ | 24,900-00 | |
| | ಯುಪಿಎಸ್ ಮತ್ತು ಬ್ಯಾಟರಿ | 37,926-00 | 54,010-50 |
| | ಪುಸ್ತಕ ಮತ್ತು ಫಾರಂ | | |
| | ಇತರೆ ಮುಂಗಡಗಳು | | 13,30,000-00 |
| | ಟಿಡಿಎಸ್ ಕಡಿತ ಹಣ | 3,30,000-00 | |
| | ಕಛೇರಿ ಮುಂಗಡ | 10,00,000-00 | |
| | ಒಟ್ಟು | | 8,19,11,441-45 |

### ದಿನಾಂಕ : 31.03.2022 ಕ್ಕೆ ಇದ್ದಂತೆ ಲಾಭ ನಷ್ಟ ತಃಖ್ತೆ

| ಕ್ರ.ಸಂ. | ವೆಚ್ಚಗಳ ವಿವರ | ಮೊಬಲಗು |
|---|---|---|
| 01) | ಬಡ್ಡಿ ಪಾವತಿಸಿದ್ದು | 42,11,243-00 |
| 02) | ಸಿಬ್ಬಂದಿ ವೇತನ | 9,88,900-00 |
| 03) | ಆಡಳಿತ ವೆಚ್ಚಗಳು | 21,61,859-50 |
| 04) | ಅವಕಾಶಗಳು | 1,61,070-00 |
| 05) | ನಿವ್ವಳ ಲಾಭ | 22,53,255-30 |
| | ಒಟ್ಟು | 97,76,327-80 |

| ಕ್ರ.ಸಂ. | ಆದಾಯದ ವಿವರ | ಮೊಬಲಗು |
|---|---|---|
| 01) | ಬಡ್ಡಿಯಿಂದ ಬಂದ ಆದಾಯ | 91,08,068-00 |
| 02) | ಇತರೆ ಆದಾಯ | 6,68,259-80 |
| | ಒಟ್ಟು | 97,76,327-80 |

### ಲೆಕ್ಕ ಪರಿಶೋಧನಾ ಧೃಡೀಕರಣ ಪತ್ರ

ದಿ ವೆಜಿಟಬಲ್ ಪ್ಲಾಂಟ್ ಸೌಹಾರ್ದ ಕೋ-ಆಪ್ ಲಿಮಿಟೆಡ್., ದಾವಣಗೆರೆ, ಇದರ 2021-22ನೇ ಸಾಲಿನ ಲೆಕ್ಕಪತ್ರಗಳನ್ನು ನಾನು ಪರಿಶೀಲಿಸಿರುತ್ತೇನೆ. ಲೆಕ್ಕ ಪರಿಶೋಧನೆಗೆ ಅಗತ್ಯವೆನಿಸಿದ ಮಾಹಿತಿ ವಿವರಣೆಗಳನ್ನು ಸಂಬಂಧಪಟ್ಟವರಿಂದ ಪಡೆದಿರುತ್ತೇನೆ. ಅವುಗಳು ನನ್ನ ಅತ್ಯುತ್ತಮ ಜ್ಞಾನ ಹಾಗೂ ನಂಬಿಕೆಯಂತೆ ತೃಪ್ತಿಕರವಾಗಿರುತ್ತವೆ. ಲೆಕ್ಕ ಪರಿಶೋಧನಾ ವೇಳೆಯಲ್ಲಿ ನನಗೆ ದೊರೆತ ಮಾಹಿತಿ ವಿವರಣೆಗಳಂತೆ ಹಾಗೂ ಲೆಕ್ಕ ಪರಿಶೋಧನಾ ವರದಿಯಲ್ಲಿ ದಿ ವೆಜಿಟಬಲ್ ಪ್ಲಾಂಟ್ ಸೌಹಾರ್ದ ಕೋ-ಆಪ್ ಲಿಮಿಟೆಡ್.,ನ ಲೆಕ್ಕ ಪತ್ರಗಳ ಬಗ್ಗೆ ತಿಳಿಸಲಾದ ಅಂಶಗಳು, ನ್ಯೂನ್ಯತೆಗಳು ಹಾಗೂ ಷರಾಗಳಿಗೊಳಪಟ್ಟು 2021-22 ಸಾಲಿನ ಲಾಭ-ನಷ್ಟದ ತಃಖ್ತೆ ಹಾಗೂ 31.03.2022ರ ಅಂತ್ಯಕ್ಕೆ ಇದ್ದಂತೆ ಆಸ್ತಿ ಜವಾಬ್ದಾರಿ ತಃಖ್ತೆಯು ಸಹಕಾರಿಯ ನಿಜವಾದ ಆರ್ಥಿಕ ಸ್ಥಿತಿಯ ನೈಜ ಚಿತ್ರಣವನ್ನು ಪ್ರತಿಬಿಂಬಿಸುತ್ತದೆಂದು ಧೃಡೀಕರಿಸುತ್ತೇನೆ.

ಸಹಿ/- ಬಿ. ಸುರೇಶ್ – ಅಧ್ಯಕ್ಷರು
ಸಹಿ/- ಜೆ.ಕೆ. ಶಿವಕುಮಾರ್ – ಉಪಾಧ್ಯಕ್ಷರು
ಸಹಿ/- ಕೆ.ಹೆಚ್. ಶಿವಯೋಗಪ್ಪ – ನಿರ್ದೇಶಕರು
ಸಹಿ/- ಆರ್.ಎನ್. ಮಾರುತಿ – ನಿರ್ದೇಶಕರು
ಸಹಿ/- ಆರ್. ವೆಂಕಟಾಚಲಮೂರ್ತಿ – ಮುಖ್ಯ ಕಾರ್ಯನಿರ್ವಾಹಕರು

ಸಿ.ಎ. ಚನ್ನಬಸವಣ್ಣ ಎನ್.,
ಸನ್ನದು ಲೆಕ್ಕಿಗರು
ಎಫ್‌ಆರ್‌ಸಂ. 105805 ಸಸಂ. 213853, UDIN 22213853ALV2DW7758